19 ಆಗಸ್ಟ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 161 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಶ್ರೀನಗರದ ಪ್ರಸಿದ್ಧ ದಲ್ ಸರೋವರದಲ್ಲಿ ಆ.21 ರಿಂದ 23ರವರೆಗೆ ನಡೆಯಲಿರುವ ಖೇಲೊ ಇಂಡಿಯಾ ಜಲ ಕ್ರೀಡಾ ಉತ್ಸವದಲ್ಲಿ ವಿವಿಧ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ 400ಕ್ಕೂ ಹೆಚ್ಚು ಕ್ರೀಡಾ ಪಟುಗಳು ಸ್ಪರ್ಧಿಸಲಿದ್ದಾರೆ.



ಆ ಕ್ಷಣದ ಸೌಂದರ್ಯ, ಸಂದರ್ಭ, ಮಹತ್ವ ಮತ್ತು ಸವಿನೆನಪುಗಳು... » 2




ವಿಪತ್ತು ನಿರ್ವಹಣೆ : ಕ್ರಿಯಾ ಯೋಜನೆ ತಯಾರಿಸಲು ಸೂಚನೆ » 3



ಭಾರತಕ್ಕೆ ಚೀನಾ ವಿದೇಶಾಂಗ ಸಚಿವರ ಭೇಟಿ » 4

# ಸಿಎಂ ವಿರುದ್ಧ ಕೊಲೆ ಆರೋಪ-ವಾಗ್ವಾದ

## ಅಧಿವೇಶನದಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಆರ್.ಅಶೋಕ್ | ಧರ್ಮಸ್ಥಳ ಪ್ರಕರಣ ಸಂಬಂಧ ಆಡಳಿತ-ವಿಪಕ್ಷಗಳ ನಡುವೆ ವಾಕ್ಸಮರ

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 24 ಕೊಲೆಗಳನ್ನು ಮಾಡಿದ್ದಾರೆಂದು ಸೌಜನ್ಯ ಪರ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಹೇಳಿಕೆ ನೀಡಿದ್ದಾರೆಂಬ ವಿಚಾರ ಸೋಮವಾರ ಸದನದಲ್ಲಿ ಗದ್ದಲಕ್ಕೆ ಕಾರಣ ವಾಯಿತು.

ವಿಪಕ್ಷ ನಾಯಕ ಆರ್.ಅಶೋಕ್ ಅವರು, ಈ ವಿಚಾರ ಪ್ರಸ್ತಾಪ ಮಾಡಿ, ಧರ್ಮಸ್ಥಳ ವಿಚಾರವಾಗಿ ಚರ್ಚೆಗಳು ನಡೆಯುತ್ತಿವೆ. ಹೀಗಿರುವಾಗ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ 24 ಕೊಲೆಗಳನ್ನು ಮಾಡಿದ್ದಾರೆಂಬ ಆರೋಪವನ್ನು ಒಬ್ಬ ವ್ಯಕ್ತಿ ಮಾಡುತ್ತಾರೆ. ಮುಖ್ಯಮಂತ್ರಿ ಕೊಲೆ ಮಾಡಿದ್ದಾರೆಂದು ಆರೋಪ ಮಾಡಿದರೆ ಹೇಗೆ. ಗೂಂಡಾ ರಾಜ್ಯ ನಡೆಯುತ್ತಿದ್ಯಾ, ಯಾರು ಬೇಕಾದರೂ ಏನು ಹೇಳಬಹುದೇ, ಮುಖ್ಯಮಂತ್ರಿ 28 ಕೊಲೆ ಮಾಡಿದ್ದಾರಾ, ಸಿಎಂ ಕೊಲೆಗಾರರೇ, ಆ ವ್ಯಕ್ತಿಯ ಮೇಲೆ ಎಸ್ಐಟಿ ರಚನೆ ಮಾಡುತ್ತಾರಾ ಎಂದು ಒಂದೇ ಸಮನೆ ಅಬ್ಬರಿಸಿದರು.



ಇದಕ್ಕೆ ಧ್ವನಿಗೂಡಿಸಿದ ಸುನೀಲ್ ಕುಮಾರ್ ಈ ಆರೋಪವನ್ನು ಸಿದ್ದರಾಮಯ್ಯ ಒಪ್ಪುತ್ತಾರಾ, ಆರೋಪ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುತ್ತೀರಾ, ಮೌನವಾಗಿದ್ದರೆ ಕೊಲೆ ಮಾಡಿದ್ದೀರಿ ಎಂದರ್ಥ, ಎಂದು ಏರು ಸ್ವರದಲ್ಲಿ ತರಾಟೆಗೆ ತೆಗೆದುಕೊಂಡರು.

ಬಿಜೆಪಿ ಸದಸ್ಯರ ಆರೋಪಗಳಿಗೆ ಪ್ರತಿಕ್ರಿಯೆ ನೀಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಆ ವ್ಯಕ್ತಿಯ ಹೇಳಿಕೆ ಗಮನಿಸಿದ್ದೇನೆ. ನಿಮ್ಮ ಪಕ್ಷದ ನಾಯಕರ ವಿರುದ್ಧನೂ ಮಾತನಾಡಿದ್ದಾರೆ. ಆದರೆ, ಸದನದಲ್ಲಿ ಅವರ ಹೆಸರು ಉಲ್ಲೇಖ ಮಾಡಿ ಅವರನ್ನು ದೊಡ್ಡವರಾಗಿ ಮಾಡಬೇಡಿ. ಅವರು ಮಾತನಾಡಿದ ಹೇಳಿಕೆ ಬಗ್ಗೆ ಸಿದ್ದರಾಮಯ್ಯ ಅವರಿಗೂ ತಿಳಿಸಿದ್ದೇನೆ. ಅವರು ಗೃಹ ಸಚಿವರಿಗೆ ಸೂಚನೆ ನೀಡಿದ್ದಾರೆಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

### ಸುಮ್ಮನೆ ಬಿಡಲ್ಲ



ಸರ್ಕಾರ ಅಸಹಾಯಕವಾಗಿದೆ ಎಂದುಕೊಂಡಿದ್ದೀರಾ. ಆ ವ್ಯಕ್ತಿ ವಿರುದ್ಧ ಹಲವು ಪ್ರಕರಣಗಳಿವೆ, ಆ ವ್ಯಕ್ತಿ ಹೆಸರು ಹೇಳಲ್ಲ. ಇಂತಹ ವ್ಯಕ್ತಿಯನ್ನು ಸಮಾಜದಲ್ಲಿ ಹೀಗೆ ಸುಮ್ಮನೆ ಬಿಡಲ್ಲ. ಕಾನೂನು ಚಲಾಯಿಸಿ ಕ್ರಮ ತಗೋತೀವಿ. ಏನು ಕ್ರಮ ತಗೋಬೇಕೋ ತಗೋತೀವಿ. ಈಗಾಗಲೇ ಕ್ರಮ ತಗೊಳ್ಳೋಕ್ಕೆ ಪೊಲೀಸರಿಗೆ ಸೂಚನೆ ಕೊಡಲಾಗಿದೆ ಎಂದು ಗೃಹ ಸಚಿವರ

### ವಿಡಿಯೋದ ಅಸಲಿಯತ್ತೇನು

ವಿಡಿಯೋದ ಅಸಲಿಯತ್ತು ಬೇರೆಯೇ ಇದ್ದು, 2023ರಲ್ಲಿ ಬೆಳ್ತಂಗಡಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ನೀಡಿದ ಹೇಳಿಕೆಯ ತುಣುಕುಗಳಾಗಿವೆ. ಶಾಸಕ ಹರೀಶ್ ಪೂಂಜಾ ವಿರುದ್ಧ ವಾಗ್ದಾಳಿ ನಡೆಸುತ್ತಾ, ಸಿದ್ದರಾಮಯ್ಯ ಅವರು ಕೊಲೆ ಮಾಡಿದ್ದಾರೆ ಎಂದು ಪೂಂಜಾ ನೀಡಿದ್ದ ಹೇಳಿಕೆಯನ್ನು ಪ್ರಸ್ತಾಪಿಸಿ, , ಸಿದ್ದರಾಮಯ್ಯ 24 ಕೊಲೆ ಮಾಡಿದ್ದಾರೆಂದು ಹರೀಶ್ ಪೂಂಜಾ ಹೇಳಿದ್ದಾರೆ. ಹೀಗಾಗಿ ಸಿದ್ದರಾಮಯ್ಯ ತಕ್ಷಣ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಹರೀಶ್ ಪೂಂಜಾ ನಮ್ಮ ಶಾಸಕ, ಅವರು ಹೇಳಿದ್ದಾರೆ. ಹಾಗಿರುವಾಗ ನಾವು ಏಕೆ ಹೆದರಬೇಕೆಂದು ಹೇಳಿದ್ದರು.

# ಹೊಗೆ ಸೊಪ್ಪು ಬೆಳೆಯದೆ ಪರವಾನಗಿ ಹೇಗೆ ಬಂತು

## ಶಾಸಕ ಎ.ಮಂಜು ವಿರುದ್ಧ ಶ್ರೀಧರ್‌ಗೌಡ ಆಕ್ರೋಶ | ವೈಯಕ್ತಿಕ ತೇಜೋವಧೆ ಸರಿಯಲ್ಲ

• ಪ್ರಜೋದಯ ವರದಿ

**ಅರಕಲಗೂಡು:** ಹೊಗೆ ಸೊಪ್ಪು ಉತ್ಪಾದಿಸದೆ ಬ್ಯಾರಲ್ ಮನೆಯೂ ಇಲ್ಲದೆ ಶಾಸಕರು ನಿಯಮ ಬಾಹಿರವಾಗಿ ತಂಬಾಕು ಮಾರುಕಟ್ಟೆಯ ಪರವಾನಗಿ ಹೊಂದಿ ಅಕ್ರಮವಾಗಿ ಸರ್ಕಾರಿ ಸವಲತ್ತು ಪಡೆದು ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂದು ಕಾಂಗ್ರೆಸ್ ಮುಖಂಡ ಹೆಚ್.ಪಿ.ಶ್ರೀಧರ್‌ಗೌಡ ಅವರು ಆಕ್ರೋಶ ವ್ಯಕ್ತಪಡಿಸಿದರು.



> ಶಾಸಕ ಎ.ಮಂಜು ತಾವು ಬೆಳೆದು ಬಂದ ಹಾದಿ ಯನ್ನು ನೆನಪು ಮಾಡಿಕೊಳ್ಳಿ ಎಂದು ಬೆದರಿಕೆ ಹಾಕುತ್ತಿದ್ದಾರೆ. ಅವರು ನಡೆದು ಬಂದ ದಾರಿಯ ಕುರಿತು ಹೇಳಿಕೊಂಡು ತಮ್ಮ ಬದುಕನ್ನು ತಾವೇ ತೆರೆದಿಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಜನರೇ ಪಾಠ ಕಲಿಸುತ್ತಾರೆ.
> -ಹೆಚ್.ಪಿ. ಶ್ರೀಧರ್‌ಗೌಡ, ಕಾಂಗ್ರೆಸ್ ಮುಖಂಡ

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ತಂಬಾಕು ಬೆಳೆಯುವ ರೈತರಿಗೆ ಹೊಗೆ ಸೊಪ್ಪು ಮಾರಾಟ ಮಾಡಲು ನಿಯಮಾನುಸಾರ ಪರವಾನಗಿ ನೀಡಲಾಗುತ್ತದೆ. ಆದರೆ, ಶಾಸಕರು ಹೊಗೆಸೊಪ್ಪು ಬೆಳೆಯುತ್ತಿಲ್ಲ, ಬ್ಯಾರಲ್ ಮನೆಯೂ ಇಲ್ಲ. ಆದರೂ ಕೊಣನೂರು ಹೋಬಳಿ ಹೊನಗನಹಳ್ಳಿ ಗ್ರಾಮದಲ್ಲಿ ಪರವಾನಗಿ ವಿತರಿಸಲಾಗಿದೆ. ಪರವಾನಗಿ ಹೆಸರಿನಲ್ಲಿ ಮಂಡಳಿಯಲ್ಲೂ ಸಹ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಬ್ಯಾರಲ್ ಮನೆ ಇಲ್ಲದೆ ತಂಬಾಕು ಉತ್ಪಾದಿಸದೆ ಪರವಾನಗಿ ಹೊಂದುವುದು ಅಪರಾಧ. ಆದರೆ ಇಲ್ಲಿ ರೈತರಿಗೊಂದು ನಿಯಮವಾದರೆ ಶಾಸಕರಿಗೆ ಅದು ಅನ್ವಯಿಸುತ್ತಿಲ್ಲವೆಂದು ಆರೋಪಿಸಿ ಶಾಸಕರು ಹೊಂದಿರುವ ಪರವಾನಗಿ ಚೀಟಿ ಪ್ರದರ್ಶಿಸಿದರು.

**ವೈಯಕ್ತಿಕ ವಿಚಾರ ಪ್ರಸ್ತಾಪಿಸಿಲ್ಲ**

ತಾಲ್ಲೂಕಿನ ಅಭಿವೃದ್ಧಿ ಕುರಿತು ಪ್ರಶ್ನಿಸಿದರೆ ನನ್ನ ವೈಯುಕ್ತಿಕ ಬದುಕಿನ ಕುರಿತು ಕುಟುಂಬಕ್ಕೆ ಕಳಂಕ ತರುವ ರೀತಿ ಸುಳ್ಳು ಆರೋಪ ಮಾಡುವ ಮೂಲಕ ಶಾಸಕರು ಕೀಳು ಮಟ್ಟದ ರಾಜಕೀಯ ಮೆರೆದಿದ್ದಾರೆ. ಪಟ್ಟಣದ ಅಭಿವೃದ್ಧಿಗೆ ರೂಪಿಸಿರುವ ಮಾಸ್ಟರ್ ಪ್ಲಾನ್ 2041 ರಲ್ಲಿ 200 ಎಕರೆ ಪ್ರದೇಶವನ್ನು ಕೈಗಾರಿಕೆ ಪ್ರದೇಶಕ್ಕೆ ಮೀಸಲಿರಿಸುವಂತೆ ಕೋರಿ ನಗರಾಭಿವೃದ್ಧಿ ಇಲಾಖೆ ಆಯುಕ್ತರನ್ನು ಭೇಟಿ ಮಾಡಿ ಮನವಿ ಮಾಡಿದ್ದೆ. ಅದನ್ನು ಸಹಿಸದೆ ಶಾಸಕರು ನನ್ನನ್ನೇ ಗುರಿಯಾಗಿಸಿ ಇಲ್ಲಸಲ್ಲದ ಆರೋಪ ಮಾಡಿದ್ದರು. ಅದರ ಕುರಿತು ಸುದ್ದಿಗೋಷ್ಠಿಯಲ್ಲಿ ಪ್ರಸ್ತಾಪಿಸಿದ್ದಲ್ಲದೆ ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ಪ್ರಶ್ನಿಸಿದ್ದೆ. ಅವರ ವೈಯುಕ್ತಿಕ ಬದುಕಿನ ಕುರಿತು ಮಾತನಾಡಿಲ್ಲ, ಅಭಿವೃದ್ಧಿ ಕಾರ್ಯಗಳ ಕುರಿತು ಪ್ರಶ್ನಿಸಿದ್ದಕ್ಕೆ ವಿಚಲಿತಗೊಂಡ ಶಾಸಕರು

» ನಾಲ್ಕನೇ ಪುಟದಲ್ಲಿ

# ಆಟೋ ಚಾಲಕರಿಗೆ ಸೇವಾ ಕೇಂದ್ರ ತೆರೆಯಿರಿ: ಡಿ.ಸಿ.



• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿರುವ ಆಟೋ ಚಾಲಕರಿಗೆ ಚಾಲನಾ ಪರವಾನಗಿ, ನವೀಕರಣ, ಪರ್ಮಿಟ್, ವರ್ಗಾವಣೆ ಸೌಲಭ್ಯಗಳಿಗಾಗಿ ಪ್ರತ್ಯೇಕ ಸೇವಾ ಕೇಂದ್ರ ತೆರೆಯುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಆಟೋ ಚಾಲಕರ ಕುಂದು-ಕೊರತೆ ಸ್ವೀಕಾರ ಸಭೆಯಲ್ಲಿ ಮಾತನಾಡಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಆಟೋ ನಿಲ್ದಾಣಕ್ಕೆ ನಿಗದಿತ ಸ್ಥಳ ಗುರುತಿಸಬೇಕು. ಆಟೋ ಚಾಲಕರಿಗೆ ಎಬಿಆರ್‌ಕೆ, ಇ-ಶ್ರಮ್ ಕಾರ್ಡ್, ಎಪಿವೈ ಸೌಲಭ್ಯ ಒದಗಿಸಲು ಕ್ರಮ ವಹಿಸಬೇಕು. ಆಟೋ ಚಾಲಕರು ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಬೇಕು. ಮಾದಕ ವ್ಯಸನಗಳಿಗೆ ಬಲಿಯಾಗಿ ಜೀವನ ಹಾಳು ಮಾಡಿಕೊಳ್ಳಬಾರದು. ಕುಟುಂಬದ ರಕ್ಷಣೆ ಅತಿಮುಖ್ಯವೆಂದರು.

ನಗರ ವ್ಯಾಪ್ತಿಯಲ್ಲಿ ವಾಹನಗಳನ್ನು ಕ್ರಮಬದ್ಧವಾಗಿ ನಿಲುಗಡೆ ಮಾಡದೆ ಅಡ್ಡಾದಿಡ್ಡಿಯಾಗಿ ನಿಲ್ಲಿಸುತ್ತಾರೆ. ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಶಿಸ್ತು ತರಬೇಕೆಂದು ಹೇಳಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ವೆಂಕಟೇಶ್ ನಾಯ್ಡು, ತಮ್ಮಯ್ಯ, ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಕಾಶ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಗಿರೀಶ್ ಸಭೆಯಲ್ಲಿ ಭಾಗವಹಿಸಿದ್ದರು.

# ಕಾನೂನು ಹೋರಾಟದ ಗೊಂದಲದಲ್ಲಿ ಎಂ.ಚಂದ್ರೇಗೌಡ

## ನನ್ನ ವಿರುದ್ಧ ನಾನೇ ಮತ ಹೇಗೆ ಹಾಕಿಕೊಳ್ಳಲಿ | ಎರಡು ದಿನದಲ್ಲಿ ಅಂತಿಮ ನಿರ್ಧಾರ

• ಪ್ರಜೋದಯ ವರದಿ

**ಹಾಸನ:** ವಿಪ್ ಉಲ್ಲಂಘನೆ ಆರೋಪದಡಿ ಮಹಾನಗರ ಪಾಲಿಕೆ ಸದಸ್ಯತ್ವವನ್ನು ಕಳೆದುಕೊಂಡಿರುವ ಮಾಜಿ ಮೇಯರ್ ಎಂ.ಚಂದ್ರೇಗೌಡ ಅವರು ಕಾನೂನು ಹೋರಾಟದ ಕುರಿತು ತಜ್ಞರೊಂದಿಗೆ ಚರ್ಚಿಸುತ್ತಿರುವುದಾಗಿ ಹೇಳಿದ್ದಾರೆ.






ನಗರಸಭೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡುವಂತೆ ಜೆಡಿಎಸ್ ವರಿಷ್ಠರು ಸೂಚಿಸಿದಾಗ ಸೊಪ್ಪು ಹಾಕದೆ ಬಿಜೆಪಿ ಹಾಗು ಕಾಂಗ್ರೆಸ್ ಸದಸ್ಯರ ಬೆಂಬಲದಿಂದ ಅವಿಶ್ವಾಸ ಗೆದ್ದಿದ್ದ ಚಂದ್ರೇಗೌಡ ಅವರು ಮಹಾನಗರ ಪಾಲಿಕೆಯ ಮೊದಲ ಮೇಯರ್ ಪಟ್ಟ ಅಲಂಕರಿಸಿದ್ದರು. ಅವಿಶ್ವಾಸ ನಿರ್ಣಯ ವೇಳೆ ಪಕ್ಷದ ವಿಪ್ ಉಲ್ಲಂಘಿಸಿದ್ದಾರೆಂದು ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್. ಲಿಂಗೇಶ್ ಅವರು ಜಿಲ್ಲಾಧಿಕಾರಿ ಕಚೇರಿ ಮೆಟ್ಟಿಲೇರಿದ್ದರು. ಆದರೆ, ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿರುವುದರಿಂದ ಪ್ರಕರಣ ತಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಅಂದಿನ ಜಿಲ್ಲಾಧಿಕಾರಿ ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಗೆ ವರ್ಗಾಯಿಸಿದ್ದರು. ಆ.14 ರಂದು ಚಂದ್ರೇಗೌಡರ ಸದಸ್ಯತ್ವ ರದ್ದುಪಡಿಸಿ ಆಯುಕ್ತರು ಆದೇಶಿಸಿದ್ದರು.

ಈ ಕುರಿತು ಸೋಮವಾರ ಪತ್ರಿಕೆಗೆ ಪ್ರತಿಕ್ರಿಯಿಸಿದ ಅವರು, ಅಕ್ಟೋಬರ್ ವೇಳೆಗೆ ಪಾಲಿಕೆ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯವಾಗಬಹುದು. ಕೊನೆ ಕ್ಷಣದಲ್ಲಿ ಹೋರಾಟ ಏಕೆಂದು ಅನಿಸುತ್ತಿದೆ. ಮತ್ತೊಂದೆಡೆ ಸ್ನೇಹಿತರು ಹೈಕೋರ್ಟ್ ಮೆಟ್ಟಿಲೇರುವಂತೆ ಸಲಹೆ ನೀಡುತ್ತಿದ್ದಾರೆ. ಏನು ಮಾಡಬೇಕೆಂದು ಇನ್ನು ನಿರ್ಧರಿಸಿಲ್ಲ, ಎರಡು ದಿನಗಳಲ್ಲಿ ಮುಂದಿನ ಹೆಜ್ಜೆ ಇಡುತ್ತೇನೆಂದರು. ಒಟ್ಟಿನಲ್ಲಿ ಸದಸ್ಯತ್ವ ರದ್ದಾದ ವಿಚಾರಕ್ಕೆ ಸಂಬಂಧಿಸಿ ಸುಮ್ಮನಿರಬೇಕೋ ಜೆಡಿಎಸ್ ವಿರುದ್ಧ ಮತ್ತೊಂದು ಸುತ್ತಿನ ಸಮರಕ್ಕೆ ಸಜ್ಜಾಗಬೇಕೆಂಬ ಗೊಂದಲದಲ್ಲಿ ಚಂದ್ರೇಗೌಡ ಅವರು ಇದ್ದಾರೆ.

ಅವಿಶ್ವಾಸ ನಿರ್ಣಯ ವೇಳೆ ನಾನು ವಿಪ್ ಉಲ್ಲಂಘಿಸಿಲ್ಲ, ನಾನೇ ನಗರಸಭೆ ಅಧ್ಯಕ್ಷನಾಗಿದ್ದರಿಂದ ನನ್ನ ವಿರುದ್ಧ ಮತ ಹಾಕಿಕೊಳ್ಳುವುದು ಹೇಗೆ ಸಾಧ್ಯ. ಅದನ್ನು ವಿಪ್ ಉಲ್ಲಂಘನೆ ಎಂದು ಹೇಗೆ ಭಾವಿಸಿದ್ದಾರೆಂಬುದು ಅರ್ಥವಾಗುತ್ತಿಲ್ಲ. ಸೂಕ್ಷ್ಮ ವಿಚಾರವಾಗಿರುವುದರಿಂದ ಕಾನೂನು ತಜ್ಞರೊಂದಿಗೆ ಚರ್ಚಿಸಲಾಗುವುದೆಂದು ಪ್ರತಿಕ್ರಿಯಿಸಿದರು.

**ಆದೇಶಕ್ಕೆ ತಡೆಯಾಜ್ಞೆ ಸಾಧ್ಯತೆ ಕಡಿಮೆ**

ಮೈಸೂರಿನ ಪ್ರಾದೇಶಿಕ ಆಯುಕ್ತರ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡುವ ಸಾಧ್ಯತೆಗಳು ಕಡಿಮೆ ಎನ್ನಲಾಗುತ್ತಿದೆ. ಸದಸ್ಯತ್ವ ರದ್ದಾಗಿರುವುದನ್ನು ಪ್ರಶ್ನಿಸಿ ಚಂದ್ರೇಗೌಡ ಹೈಕೋರ್ಟ್ ಬಾಗಿಲು ತಟ್ಟಿದರೆ ಜಟಿಲವಾಗಬಹುದೆಂಬುದನ್ನು ಮೊದಲೇ ಅರಿತಿದ್ದ ಜೆಡಿಎಸ್ ನಾಯಕರು ವಕೀಲರ ಮೂಲಕ ಹೈ ಕೋರ್ಟ್‌ನಲ್ಲಿ ಕೆವಿಯಟ್ ಸಲ್ಲಿಸಿದ್ದಾರೆ.

# ಹಾಸನಾಂಬ ಜಾತ್ರೆ: ಸಿದ್ಧತೆಗೆ ಸೂಚನೆ

• ಪ್ರಜೋದಯ ವರದಿ

**ಹಾಸನ :** ಹಾಸನಾಂಬ ದರ್ಶನಕ್ಕೆ ಆಗಮಿಸುವ ಜನಸಂದಣಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಮೂಲಕ ದೇವಿ ದರ್ಶನಕ್ಕೆ ಅವಕಾಶ ಕಲ್ಪಿಸಲು ಅಗತ್ಯ ಸಿದ್ಧತೆಗೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಿದ್ದೇಶ್ವರ ಹಾಗು ಹಾಸನಾಂಬ ಜಾತ್ರಾ ಮಹೋತ್ಸವ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಈಗಾಗಲೇ ರಚಿಸಿರುವ ವಿವಿಧ ಸಮಿತಿಗಳು ಸಮನ್ವಯತೆಯಿಂದ ಜವಾಬ್ದಾರಿ ನಿಭಾಯಿಸಬೇಕೆಂದರು.

ಜನಸಂದಣಿ ನಿರ್ವಹಣೆ ಮಾಡಲು ಪ್ರತಿನಿತ್ಯ ಬಸ್, ರೈಲು ಮತ್ತು ಟೋಲ್‌ಗಳನ್ನು ಹೊರತುಪಡಿಸಿ ಇತರೆ ಮಾರ್ಗಗಳಲ್ಲಿ ನಗರಕ್ಕೆ ಪ್ರವೇಶಿಸುವ ವಾಹನಗಳ ಮಾಹಿತಿಯನ್ನು ಅಧಿಕಾರಿಗಳು ನೀಡಬೇಕು. ವಾಹನಗಳ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಜೊತೆಗೆ ಪಾದರಕ್ಷೆ ಬಿಡಲು ನಿಲ್ದಾಣ, ಟಿಕೆಟ್ ಕೌಂಟರ್, ಸಾಂಸ್ಕೃತಿಕ ಕಾರ್ಯಕ್ರಮ, ವಸ್ತುಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಬೇಕು ಎಂದ ಅವರು ಜನರ ಸುರಕ್ಷತೆ ದೃಷ್ಟಿಯಿಂದ ನಿತ್ಯ ಬೆಳಿಗ್ಗೆ ಮತ್ತು ಸಂಜೆ ಬ್ಯಾರಿಕೇಡ್ ಸುಸ್ಥಿತಿಯಲ್ಲಿರುವುದನ್ನು ಪರಿಶೀಲಿಸಬೇಕೆಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ತಮ್ಮಯ್ಯ, ಉಪ ವಿಭಾಗಾಧಿಕಾರಿಗಳಾದ ಮಾರುತಿ, ರಾಜೇಶ್ ಇತರರಿದ್ದರು.

# ಎಸ್‌ಬಿಎಂ ಕಾಲೋನಿಗೆ ಪಾಲಿಕೆ ಅಧಿಕಾರಿಗಳ ಭೇಟಿ

• ಪ್ರಜೋದಯ ವರದಿ

**ಹಾಸನ:** ನಗರದ ಎಸ್‌ಬಿಎಂ ಕಾಲೋನಿಗೆ ಸೋಮವಾರ ಭೇಟಿ ನೀಡಿದ ಮಹಾನಗರ ಪಾಲಿಕೆ ಅಧಿಕಾರಿಗಳು ಸ್ಥಳೀಯರಿಂದ ಅಹವಾಲು ಸ್ವೀಕರಿಸಿದರು.

ಪ್ರಜೋದಯ ಪತ್ರಿಕೆಯಲ್ಲಿ ಆ.18ರಂದು ಪ್ರಕಟವಾದ ಮೂಲ ಸೌಲಭ್ಯದಿಂದ ವಂಚಿತ ಎಸ್‌ಬಿಎಂ ಕಾಲೋನಿ ವಿಶೇಷ ವರದಿಗೆ ಎಚ್ಚೆತ್ತು ಪಾಲಿಕೆ ಇಂಜಿನೀಯರ್‌ಗಳಾದ ಜೈಪಾಲ್, ಸುಜಿತ್ ಹಾಗು ನಿರಂಜನ್ ಭೇಟಿ ನೀಡಿ ಸ್ವಚ್ಛತೆ, ಕಾಂಪೌಂಡ್ ಕಾಮಗಾರಿ, ರಸ್ತೆ ಸಮಸ್ಯೆ ಕುರಿತು ಸ್ಥಳೀಯರೊಂದಿಗೆ ಚರ್ಚಿಸಿದರು.




ಬಡಾವಣೆಯಲ್ಲಿ ಪಾರ್ಕ್‌ಗಾಗಿ ಮೀಸಲಿಟ್ಟ ಜಾಗ ಪಾಳು ಬಿದ್ದಿದ್ದು, ಒತ್ತುವರಿದಾರರ ಭೀತಿ ಕಾಡುತ್ತಿದೆ. ಸರ್ಕಾರಿ ಜಾಗ ರಕ್ಷಿಸಬೇಕೆಂದು ನಿವಾಸಿಗಳು ಪತ್ರಿಕೆ ಮೂಲಕ ಆಗ್ರಹಿಸಿದ್ದರು.

ಜೊತೆಗೆ ಕಸ ವಿಲೇವಾರಿ ವಾಹನ ಬಾರದೆ ಎಲ್ಲೆಂದರಲ್ಲಿ ಕಸದ ರಾಶಿ ಬಿದ್ದಿದ್ದು, ಸಾಂಕ್ರಾಮಿಕ ಕಾಯಿಲೆಗಳು ಹರಡುತ್ತಿವೆ. ಬೀದಿ ದೀಪಗಳಿಲ್ಲದೆ ರಾತ್ರಿ ಹೊತ್ತು ಸಂಚರಿಸುವುದು ಕಷ್ಟವಾಗಿದೆ ಎಂದು ಅಳಲು ತೋಡಿಕೊಂಡಿದ್ದರು.

ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು ಮಾತನಾಡಿ, ಕಸ ಸಂಗ್ರಹ ವಾಹನ ನಿತ್ಯ ಬರುವಂತೆ ಸೂಚಿಸಲಾಗಿದೆ. ವಿದ್ಯುತ್ ದೀಪ ಸಮಸ್ಯೆ ಬಗೆ ಹರಿಸಲಾಗುವುದು. ಕಾಂಪೌಂಡ್ ನಿರ್ಮಾಣ ಸಂಬಂಧ ಮಳೆ ಕಡಿಮೆಯಾದ ತಕ್ಷಣ ಸರ್ವೆ ಮಾಡಿ ಸುತ್ತಲೂ ಬೇಲಿ ನಿರ್ಮಿಸಿ ಸ್ವಚ್ಛಗೊಳಿಸಲಾಗುವುದು. ಅನುದಾನ ಲಭ್ಯತೆ ಮೇಲೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು. ಕಾಲೋನಿ ನಿವಾಸಿಗಳು ಎದುರಿಸುತ್ತಿದ್ದ ಸಮಸ್ಯೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಅಧಿಕಾರಿಗಳ ಗಮನ ಸೆಳೆದಿದ್ದಕ್ಕೆ ಸಾರ್ವಜನಿಕರು ಪ್ರಜೋದಯ ಪತ್ರಿಕೆಗೆ ಧನ್ಯವಾದ ಸಲ್ಲಿಸಿದರು.

# ಮೂರು ತಾಲ್ಲೂಕು ಶಾಲೆಗೆ ರಜೆ

ಹಾಸನ : ಮಲೆನಾಡು ಮತ್ತು ಅರೆಮಲೆನಾಡು ಭಾಗದಲ್ಲಿ ಮಳೆಯ ಆರ್ಭಟ ಮುಂದುವರೆದ ಹಿನ್ನಲೆ ಮಂಗಳವಾರ ಸಕಲೇಶಪುರ, ಅರಕಲಗೂಡು ತಾಲ್ಲೂಕಿನ ಎಲ್ಲಾ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ರಜೆ ಘೋಷಿಸಲಾಗಿದೆ.

ಆಲೂರು ತಾಲ್ಲೂಕಿನ ಪಾಳ್ಯ, ಕೆ.ಹೊಸಕೋಟೆ ಹೋಬಳಿ, ಬೇಲೂರು ತಾಲ್ಲೂಕಿನ ಬಿಕ್ಕೋಡು ಮತ್ತು ಅರೇಹಳ್ಳಿ ಹೋಬಳಿ ವ್ಯಾಪ್ತಿಯ ಅಂಗನವಾಡಿ, ಶಾಲೆಗಳಿಗೆ ಮಾತ್ರ ರಜೆ ನೀಡಿ ಜಿಲ್ಲಾಧಿಕಾರಿ ಅವರು ಆದೇಶ ಹೊರಡಿಸಿದ್ದಾರೆ. ಸೋಮವಾರ ಕೂಡ ಸಕಲೇಶಪುರ, ಬೇಲೂರು, ಆಲೂರು ತಾಲ್ಲೂಕಿನ ಕೆ.ಹೊಸಕೋಟೆ ಹೋಬಳಿಗೆ ರಜೆ ನೀಡಲಾಗಿತ್ತು.

# ಸಂಪುಟಕ್ಕೆ ರಾಜಣ್ಣ ಮರು ಸೇರ್ಪಡೆಗೆ ಆಗ್ರಹ

## ವಾಲ್ಮೀಕಿ ನಾಯಕರ ಸಂಘ, ದಲಿತ ಸಂಘಟನೆಗಳ ಒಕ್ಕೂಟ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಕೆ.ಎನ್.ರಾಜಣ್ಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿರುವುದನ್ನು ಖಂಡಿಸಿ, ಪುನಃ ಸಂಪುಟಕ್ಕೆ ಸೇರ್ಪಡಿಸಿಕೊಳ್ಳುವಂತೆ ಒತ್ತಾಯಿಸಿ ವಾಲ್ಮೀಕಿ ನಾಯಕರ ಸಂಘ, ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ, ಮಾದಿಗ ಮೀಸಲಾತಿ ಹೋರಾಟ ಸಮಿತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಎನ್.ಆರ್.ವೃತ್ತದ ಮೂಲಕ ರಾಜಣ್ಣ ಅವರ ಪರ ಘೋಷಣೆ ಕೂಗುತಾ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಲಾಯಿತು.



ದಲಿತ ಮುಖಂಡ ಕೃಷ್ಣದಾಸ್ ಅವರು ಮಾತನಾಡಿ, ಕಾಂಗ್ರೆಸ್ ನಾಯಕರು ಮತಗಳ್ಳತನದ ಬಗ್ಗೆ ದೇಶಾದ್ಯಂತ ಮಾತನಾಡುತ್ತಿದ್ದಾರೆ. ಇದರಿಂದ ಸಂವಿಧಾನಕ್ಕೆ, ಪ್ರಜಾಪ್ರಭುತ್ವಕ್ಕೆ ಮೋಸ ಆಗಿದೆ ಎಂದು ಧ್ವನಿ ಎತ್ತುತ್ತಿದ್ದಾರೆ. ಆದರೆ, ಅದೇ ಕಾಂಗ್ರೆಸ್‌ನವರು ಸಣ್ಣ ಸಣ್ಣ ಜಾತಿ ನಾಯಕರ ಮೇಲೆ ಹೀಗೆ ದಾಳಿ, ಗದಾಪ್ರಹಾರ ಮಾಡಿದರೆ ಪ್ರಜಾಪ್ರಭುತ್ವದ ಆಶಯ ಎಲ್ಲಿ ಉಳಿಯಲಿದೆ. ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಸರಿಯಲ್ಲ. ಕಾಂಗ್ರೆಸ್ ಮುಂದೆಯೂ

» ನಾಲ್ಕನೇ ಪುಟದಲ್ಲಿ

# ಪ್ರತ್ಯೇಕ ಅಪಘಾತ: ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ :** ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟು, ಮತ್ತಿಬ್ಬರು ಗಾಯಗೊಂಡಿರುವ ಘಟನೆ ಸಂಚಾರ ಹಾಗು ಗಂಡಸಿ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ನಡೆದಿದೆ.

ನಗರದ ರಿಂಗ್ ರಸ್ತೆಯ ಪೆಟ್ರೋಲ್ ಬಂಕ್ ಹತ್ತಿರ ಬೈಕ್ ಡಿಕ್ಕಿಯಾಗಿ ವ್ಯಕ್ತಿಯೊಬ್ಬರು ಮೃತ ಪಟ್ಟಿದ್ದಾನೆ. ಹುಣಸಿನಕೆರೆ ಬಡಾವಣೆಯ ಚಂದನ್ (35) ಮೃತರು. ರಾತ್ರಿ 11ರ ಸಮಯ ದಲ್ಲಿ ಮನೆಗೆ ಬರುತ್ತಿದ್ದಾಗ ರಿಂಗ್ ರಸ್ತೆಯ ನಯಾರಾ ಪೆಟ್ರೋಲ್ ಬಂಕ್ ಬಳಿ ಬೈಕ್ ನಿಲ್ಲಿಸಿಕೊಂಡು ನಿಂತಿದ್ದಾಗ ವೇಗವಾಗಿ ಬಂದ ಬೈಕ್ ಸವಾರ ಡಿಕ್ಕಿ ಹೊಡೆದಿದ್ದಾನೆ. ತಲೆಗೆ ಪೆಟ್ಟು ಬಿದ್ದ ಹಿನ್ನಲೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟು, ಹೆಂಡತಿ-ಮಗು ಗಾಯಗೊಂಡಿರುವ ಘಟನೆ ಅರಸೀಕೆರೆ ತಾಲ್ಲೂಕು ಚಿಟ್ಟನಹಳ್ಳಿ ಸಮೀಪ ನಡೆದಿದೆ.

ಹಂದ್ರಾಳು ಗ್ರಾಮದ ಮಂಜುನಾಥ್ (45) ಮೃತರು. ಪತ್ನಿ ಪಲ್ಲವಿ ಹಾಗು ಪುತ್ರ ಪೃಥ್ವಿ ಗಾಯಾಳುಗಳು. ಅಡುಗೆ ಭಟ್ಟರ ಕೆಲಸ ಮಾಡಿ ಕೊಂಡಿದ್ದ ಮಂಜುನಾಥ್ ಬಾಗೇಶಪುರದಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದರು. ಮಗನಿಗೆ ಹುಷಾರಿಲ್ಲದ ಹಿನ್ನಲೆಯಲ್ಲಿ ಅರಸೀಕೆರೆ ಆಸ್ಪತ್ರೆಗೆ ತೋರಿಸಿ ಬೈಕ್‌ನಲ್ಲಿ ಮನೆಗೆ ವಾಪಾಸಾಗುತ್ತಿದ್ದರು. ಅರಸೀಕೆರೆ-ಹಾಸನ ರಸ್ತೆಯ ಚಿಟ್ಟನಹಳ್ಳಿ ಸಮೀಪ ಎದುರುಗಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಮೂವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಮಂಜುನಾಥ್ ಮೃತಪಟ್ಟಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಶಿರಾಡಿಘಾಟ್ ರಸ್ತೆಯಲ್ಲಿ ಮತ್ತೆ ಗುಡ್ಡ ಕುಸಿತ | ದೋಣಿಗಾಲ್ ಬಳಿ 100 ಮೀಟರ್‌ನಷ್ಟು ತಡೆಗೋಡೆಗೆ ಹಾನಿ

# ಮಳೆಯ ಆರ್ಭಟ : ತತ್ತರಗೊಂಡ ಮಲೆನಾಡು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಮಲೆನಾಡು ಭಾಗದಲ್ಲಿ ಕಳೆದು ಮೂರು ದಿನಗಳಿಂದ ಬಿಡುವಿಲ್ಲದೆ ಸುರಿಯುತ್ತಿರುವ ಧಾರಾಕಾರ ಮಳೆಗೆ ಜನರು ಅಕ್ಷರಶಃ ನಲುಗಿ ಹೋಗಿದ್ದಾರೆ.

ಜೋರು ಗಾಳಿ ಸಹಿತ ಸುರಿಯುತ್ತಿರುವ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಮಳೆಯ ಅಬ್ಬರಕ್ಕೆ ರಸ್ತೆಯಲ್ಲಿ ವಾಹನಗಳು ಸಂಚರಿಸುವುದೇ ಕಷ್ಟವಾಗಿದೆ. ಹೇಮಾವತಿ ಜಲಾಶಯದ ನೀರಿನ ಸಂಗ್ರಹ ಮಟ್ಟ ಏರಿಕೆಯಾಗಿದ್ದು, ಆರು ಕ್ರಸ್ಟ್ ಗೇಟ್‌ಗಳ ಮೂಲಕ ನದಿಗೆ ನೀರು ಹರಿಸಲಾಗುತ್ತಿದೆ.

**ಹಲವು ಕಡೆ ಗುಡ್ಡ ಕುಸಿತ**

ಶಿರಾಡಿಘಾಟ್ ಭಾಗದಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನಲೆ ರಾಷ್ಟ್ರೀಯ ಹೆದ್ದಾರಿ-75ರ ಹಲವು ಕಡೆ ಗುಡ್ಡ ಕುಸಿಯುತ್ತಿದೆ. ಅವೈಜ್ಞಾನಿಕ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿಯಿಂದ ಗುಡ್ಡ ಕುಸಿತ ಸಾಮಾನ್ಯವಾಗಿದೆ. ಸಕಲೇಶಪುರ ತಾಲ್ಲೂಕಿನ ಕಪ್ಪಳ್ಳಿ ಬಳಿ ರಸ್ತೆಗೆ ಅಪಾರ ಪ್ರಮಾಣದ ಮಣ್ಣು ಮತ್ತು ಬೃಹತ್ ಬಂಡೆ ಕುಸಿದು ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.



ನೂರಾರು ಅಡಿ ಎತ್ತರದ ಗುಡ್ಡ ಕಡಿದು ರಸ್ತೆ ನಿರ್ಮಾಣ ಮಾಡಲಾಗಿದೆ. ಆದರೆ, ರಸ್ತೆಯ ಬದಿಯಲ್ಲಿ ಚರಂಡಿ ನಿರ್ಮಿಸದೆ ಇರುವುದರಿಂದ ಮಳೆ ನೀರು ರಸ್ತೆಯಲ್ಲಿ ಹರಿಯುತ್ತಿರುವುದರಿಂದ ವಾಹನ ಸವಾರರು ಪರದಾಡುವಂತಾಗಿದೆ. ಯಾವಾಗ ಎಲ್ಲಿ ಗುಡ್ಡ ಕುಸಿದು ಬೀಳುತ್ತೋ ಎಂಬ ಆತಂಕದಲ್ಲಿ ವಾಹನ ಸವಾ ರರು ಇದ್ದಾರೆ.

**ತಡೆಗೋಡೆ ಕುಸಿತ**

ಸಕಲೇಶಪುರ ತಾಲ್ಲೂಕಿನ ದೋಣಿಗಾಲ್ ಬಳಿ ಕಟ್ಟಿದ್ದ ತಡೆಗೋಡೆ ಕುಸಿತಗೊಂಡಿದೆ. ಜುಲೈನಲ್ಲಿ ಮಳೆಗೆ ಸ್ವಲ್ಪ ಪ್ರಮಾಣದಲ್ಲಿ ತಡೆಗೋಡೆ ಕುಸಿತವಾಗಿತ್ತು. ಇದೀಗ 100 ಮೀಟರ್ ತನಕ ತಡೆಗೋಡೆ ಕುಸಿದಿದೆ. ಮತ್ತೆ ಮಳೆ ಹೆಚ್ಚಾದರೆ ರಸ್ತೆಯೇ ಕುಸಿದು ಬೀಳುವ ಆತಂಕವಿದೆ. ಭಾರೀ ಮಳೆಯಿಂದ ಶಿರಾಡಿ ಘಾಟ್ ಭಾಗದ ಕಾಫಿ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಚತುಷ್ಪಥ ರಸ್ತೆ ನಿರ್ಮಾಣಕ್ಕಾಗಿ ಕಡಿದಾಗಿ ಮಣ್ಣು ತೆಗೆದು ರಸ್ತೆ ನಿರ್ಮಿಸಿದ್ದರಿಂದ ಕಾಫಿ ತೋಟಗಳು ಕುಸಿಯುವ ಸಾಧ್ಯತೆ ಇರುವುದರಿಂದ ಬೆಳೆಗಾರರಿಗೆ ಅಪಾರ ಪ್ರಮಾಣದ ನಷ್ಟ ಉಂಟಾಗುತ್ತಿದೆ.

**ಜಲಾಶಯದ ನೀರಿನ ಮಟ್ಟ ಏರಿಕೆ**

ಹೇಮಾವತಿ ಜಲಾಶಯದ ಒಳಹರಿವಿನಲ್ಲಿ ಭಾರೀ ಏರಿಕೆಯಾಗಿದೆ. ಜಲಾಶಯಕ್ಕೆ 32,087 ಕ್ಯೂಸೆಕ್ ಒಳಹರಿವಿದ್ದು, ಆರು ಕ್ರಸ್ಟ್ ಗೇಟ್‌ಗಳ ಮೂಲಕ 32,925 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಈ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಜಲಾಶಯ 37.103 ಟಿಎಂಸಿ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದ್ದು, ಸದ್ಯ 37.006 ಟಿಎಂಸಿ ನೀರು ಸಂಗ್ರಹವಾಗಿದೆ. ಜಲಾಶಯದ ಗರಿಷ್ಠ ಮಟ್ಟ 2922.00 ಅಡಿಗಳಾಗಿದ್ದು, ಸೋಮವಾರ 2921.90 ಅಡಿಗೆ ತಲುಪಿದೆ.

**ಹೆತ್ತೂರಿನಲ್ಲಿ 5 ಇಂಚು ಮಳೆ**

ಮಲೆನಾಡು ಮತ್ತು ಪಶ್ಚಿಮಘಟ್ಟಕ್ಕೆ ಹೊಂದಿಕೊಂಡಂತಿರುವ ಗ್ರಾಮಗಳಲ್ಲಿ ಮಳೆಯ ಅಬ್ಬರ ಜೋರಾಗಿದೆ. ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆ ಗೊಂಡಂತೆ ಸಕಲೇಶಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಹೆಚ್ಚು ಮಳೆ ದಾಖಲಾಗಿದೆ. ಹೆತ್ತೂರು ಹೋಬಳಿ ಭಾಗದಲ್ಲಿ ಗರಿಷ್ಠ 5 ಇಂಚು ಮಳೆಯಾಗಿದೆ. ಹಾನುಬಾಳು ಹೋಬಳಿಯಲ್ಲಿ 3 ಇಂಚು, ಸಕಲೇಶಪುರ ಪಟ್ಟಣದಲ್ಲಿ 3 ಇಂಚು, ಯಸಳೂರು ಹೋಬಳಿಯಲ್ಲಿ 3 ಇಂಚು, ಬೆಳಗೊಡು ಹೋಬಳಿಯಲ್ಲಿ 2 ಇಂಚು, ಕೆ.ಹೊಸ 'ಕೋಟೆ 2, ಅರೇಹಳ್ಳಿ ಹೋಬಳಿಯಲ್ಲಿ 2 ಇಂಚು ಮಳೆ ಸುರಿದಿದೆ.

# ಉಪನ್ಯಾಸಕರಿಗೆ ತರಬೇತಿ ಅವಶ್ಯಕತೆ ಹೆಚ್ಚಿದೆ




• ಪ್ರಜೋದಯ ವರದಿ

**ಹಾಸನ:** ಬದಲಾದ ಕಾಲಘಟ್ಟದಲ್ಲಿ ಉಪನ್ಯಾಸಕರಿಗೂ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕೊಡಿಸುವ ಅವಶ್ಯಕತೆ ಹೆಚ್ಚಿದೆ ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಅವರು ಹೇಳಿದರು.

ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜು ಗಣಿತ ವಿಭಾಗದಿಂದ ಹಮ್ಮಿಕೊಂಡಿರುವ 7 ದಿನಗಳ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿ, ಉಪನ್ಯಾಸಕರಿಗೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಗಳ ಕುರಿತು ಮಾಹಿತಿ ನೀಡುವುದು ಅತ್ಯವಶ್ಯಕ. ಕಾಲೇಜು ಅಭಿವೃದ್ಧಿಗಾಗಿ ಹಲವಾರು ಹೊಸ ಯೋಜನೆಯ ಮೂಲಕ ಕೆಲಸ ಮಾಡಲು ಬದ್ಧರಿದ್ದೇವೆ. ಇಂತಹ ಕಾರ್ಯಾಗಾರಗಳ ಮೂಲಕ ಉಪನ್ಯಾಸಕರು ಇನ್ನೂ ಹೆಚ್ಚಿನ ಜ್ಞಾನ ಪಡೆದು ವಿದ್ಯಾರ್ಥಿಗಳಿಗೆ ಸಹಾಯವಾಗಲಿ ಎಂದರು.

ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಅವರು ಮಾತನಾಡಿ, ನಮ್ಮ ಸಂಸ್ಥೆಗಳಲ್ಲಿ ಗುಣಮಟ್ಟದ ಕಲಿಕೆಗೆ ಬೇಕಾದ ಎಲ್ಲಾ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ. ವಿಚಾರ ಮಂಥನ, ಅಧ್ಯಯನ ತರಬೇತಿ, ಆವಿಷ್ಕಾರಗಳಿಗೆ ಬದ್ಧವಾಗಿ ಶಿಕ್ಷಣ ನೀಡಲು ಕಟಿಬದ್ಧರಾಗಿದ್ದೇವೆಂದರು. ತರಬೇತುದಾರ ಡಾ. ಅಶೋಕ್‌ರಾವ್ ಉಪನ್ಯಾಸಕರಿಗೆ ಮಾರ್ಗ ದರ್ಶನ ನೀಡಿದರು. ಮಲೆನಾಡು ಇಂಜಿನೀಯರಿಂಗ್ ಕಾಲೇಜು ಗಣಿತ ವಿಭಾಗ ಮುಖ್ಯಸ್ಥೆ ಡಾ.ಜಿ.ಕೆ. ಕಲಾವತಿ, ಸಹ ಸಂಯೋಜಕಿ ಸಿ.ಎಂ.ಚಿತ್ರ, ಸಹ ಪ್ರಾಧ್ಯಾಪಕಿ ಕೆ.ಎಸ್. ಚಾಂದಿನಿ ಮತ್ತಿತರರಿದ್ದರು.

# ಆ ಕ್ಷಣದ ಸೌಂದರ್ಯ, ಸಂದರ್ಭ, ಮಹತ್ವ ಮತ್ತು ಸವಿನೆನಪುಗಳು...


■ ಪ್ರಕೃತಿಯ ಪ್ರತಿಯೊಂದು ಆಯಾಮಗಳಲ್ಲಿಯೂ ಅದ್ಭುತವಾದ ಕಲಿಕಾ ವಿಷಯವಿದೆ. ನಿಸರ್ಗದತ್ತವಾದ ಪ್ರಕೃತಿಯ ನಿಜವಾದ ಆಸ್ವಾದವನ್ನು ಸವಿಯಲು ಕ್ಯಾಮೆರಾ ಕಣ್ಣುಗಳೇ ಕೊಂಡಿಯಾಗಿ ಕೆಲಸ ಮಾಡುತ್ತವೆ.

ಮನುಷ್ಯನ ಸಂವಹನ ಆರಂಭವಾಗಿದ್ದು ಚಿತ್ರದಿಂದ. ಒಂದು ಚಿತ್ರ ನೂರಾರು ಸಾವಿರಾರು ಪದಗಳಿಗೆ ಸಮ ಎಂಬುದು ನಿರ್ವಿವಾದ. ಹಿಂದಿನ ಕಲಾವಿದರು ಚಿತ್ರಗಳನ್ನು ಮುಂಚೆ ಕೈಗಳಲ್ಲಿ ಬಿಡಿಸುತ್ತಿದ್ದರು. ಪದಗಳಲ್ಲಿ ವರ್ಣಿಸಲು ಸಾಧ್ಯವಾಗದ ಅದೆಷ್ಟೋ ವಿಷಯಗಳನ್ನು ಒಂದು ಚಿತ್ರ ತಿಳಿಸುತ್ತದೆ. ಯಾವುದೇ ವಿಷಯವನ್ನು ಹೇಳುವಾಗ ಚಿತ್ರ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಫೋಟೋಗ್ರಫಿಯೂ ಪ್ರತಿ ಕಾರ್ಯಕ್ರಮಗಳ ಮುಖ್ಯ ಭಾಗವೇ ಆಗಿ ಹೋಗಿದೆ. ಪದಗಳಿಗಿಂತ ವೇಗವಾಗಿ ವಿಷಯವನ್ನು ತಿಳಿಸಬಲ್ಲ ವಸ್ತುವೇ ಛಾಯಾಚಿತ್ರ.

ಗ್ರೀಕ್ ಭಾಷೆಯಲ್ಲಿ ಫೋಟೋ ಎಂದರೆ ಬೆಳಕು. ಗ್ರಫಿ ಎಂದರೆ ಬರೆಯುವುದು. ಅಂದರೆ ಬೆಳಕಿನಿಂದ ರೂಪುಗೊಂಡ ಚಿತ್ರ.


ಪ್ರತಿ ವರ್ಷ ಆಗಸ್ಟ್ 19ರಂದು ವಿಶ್ವ ಛಾಯಾಗ್ರಹಣ ದಿನವನ್ನು ಜಗತ್ತಿನಾದ್ಯಂತ ಆಚರಣೆ ಮಾಡುತ್ತಾರೆ. ಫೋಟೋಗ್ರಫಿಯ, ಕರಕುಶಲ, ಇತಿಹಾಸ, ಮಾನ್ಯತೆ, ಪ್ರಾಮುಖ್ಯತೆ, ಪ್ರಾಧಾನ್ಯತೆ, ಪ್ರಾವೀಣ್ಯತೆ, ಅನ್ನದ ಕೆಲಸವಾಗಿ ವೃತ್ತಿ, ಅನಿವಾರ್ಯತೆ, ದಿನೇ ದಿನೇ ಜನಸಾಮಾನ್ಯರಿಗೆ ಅವಶ್ಯಕತೆ, ಅಲ್ಲದೆ ಅಡುಗೆ ಮನೆಯಿಂದ ಅಂತರಿಕ್ಷದವರೆಗೆ ಬಳಕೆ, ನಿತ್ಯ ನೂತನವಾಗಿರುವ ಶಕ್ತಿ ಫೋಟೋಗ್ರಫಿಗೆ ಇದೆ ಎಂದರೆ ತಪ್ಪಾಗಲಾರದು.

1939ರ ಆಗಸ್ಟ್ 19ರಂದು ಫ್ರಾನ್ಸ್ ದೇಶದಲ್ಲಿ ವಿಶ್ವ ಛಾಯಾಗ್ರಹಕರ ದಿನವನ್ನು ಘೋಷಣೆ ಮಾಡಿದರು. ತದನಂತರ ಛಾಯಾಗ್ರಹಣದ ಮನ್ನಣೆಯನ್ನು ಅರಿತು, 2010ರಲ್ಲಿ ಆಗಸ್ಟ್ 19ರಂದು ವಿಶ್ವದ ನೂರು ದೇಶದಲ್ಲಿ ಆನ್ಲೈನ್ ಗ್ಯಾಲರಿಯಲ್ಲಿ ಮೊದಲು ಆಚರಣೆ ಮಾಡಿದವು. ವೃತ್ತಿಪರ ಛಾಯಾಗ್ರಾಹಕರು ತಮ್ಮ ಯೋಚನೆಗಳನ್ನು, ಯೋಜನೆಗಳನ್ನು ರೂಪಿಸಿಕೊಳ್ಳಲು ವಿಶ್ವ ರಾಷ್ಟ್ರ ರಾಜ್ಯ ಮಟ್ಟದಲ್ಲಿ ಛಾಯಾಗ್ರಾಹಕರ ದಿನವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಣೆ ಮಾಡುತ್ತಾರೆ. ಗ್ರಾಮೀಣ ಮಟ್ಟದಿಂದ ವಿಶ್ವಮಟ್ಟದವರೆಗೆ ಶ್ರೇಷ್ಠ ಚಿತ್ರಗಳನ್ನು ಹಂಚಿಕೊಳ್ಳುವ ಸುಂದರ ವೇದಿಕೆ ಇದಾಗಿದೆ. ಫೋಟೋಗ್ರಫಿಯ ದಿನ ಜಾಗೃತಿ ಮೂಡಿಸುವ ದಿನ ಇದು.



ಫೋಟೋಗ್ರಫಿಯ ಇತಿಹಾಸ ಇಂದು ನಿನ್ನೆಯದಲ್ಲ. ಸಾವಿರಾರು ವರ್ಷಗಳ ಇತಿಹಾಸ ಇದ್ದರು ಸಹ ಆಧುನಿಕ ಫೋಟೋಗ್ರಾಫಿ ಇನ್ನೂರು ವರ್ಷಗಳ ಹಿಂದೆ ಅಭಿವೃದ್ಧಿಯಾಯಿತು. ಕ್ರಿಸ್ತಪೂರ್ವ 5ನೇ ಶತಮಾನದಲ್ಲಿ ಚೀನಾದ ಮೊ ಜಿ ಹಾಗೂ ಗ್ರೀಕ್ ದೇಶದ ಅರಿಸ್ಟಾಟಲ್ ತತ್ವಜ್ಞಾನಿಗಳು ಸಣ್ಣ ರಂಧ್ರದ ಮೂಲಕ ಹೊರಗಿನ ಚಿತ್ರವನ್ನು ತಲೆಕೆಳಕಾಗಿ ಕಾಣುವ ತಂತ್ರಜ್ಞಾನ ಕಂಡುಹಿಡಿದರು. 11ನೇ ಶತಮಾನದಲ್ಲಿ ಅಲ್ ಹಸನ್ ವಿವರವಾಗಿ ಬರೆದನು. 1727ರಲ್ಲಿ ಜೊಹಾನ್ ಹೆನ್ರಿಸ್ ಶುಲ್ಜ್ ಬೆಳ್ಳಿಯ ಉಪ್ಪಿನ ಬೆಳಕಿನ ಪ್ರತಿಕ್ರಿಯೆ ನೀಡುವುದನ್ನು ಕಂಡುಹಿಡಿದನು. ಇದರಿಂದ ಶಾಶ್ವತವಾಗಿ ಸೆರೆ ಹಿಡಿಯುವ ಪ್ರಯತ್ನ ಆರಂಭವಾದವು. 1826ರಲ್ಲಿ ಜೋಸೆಫ್ ನೈಸ್ ಫೋರ್ ನಿಯೋಸ್, ಜಗತ್ತಿನ ಮೊದಲ ಶಾಶ್ವತ ಫೋಟೋ ತೆಗೆದನು. 1839ರಲ್ಲಿ ಲೂಯಿಸ್ ಡ್ಯಾಗುರೆ, ಡ್ಯಾ ಗರೋ ಟೈಪ್ ಫೋಟೋಗ್ರಾಫಿಯನ್ನು ಕಂಡುಹಿಡಿದರು. ಇದನ್ನೇ ಆಧುನಿಕ ಫೋಟೋಗ್ರಾಫಿಯ ಜನನದ ವರ್ಷ ಎಂದು ಪರಿಗಣಿಸಲಾಗುತ್ತದೆ. 19-20ನೇ ಶತಮಾನದಲ್ಲಿ, ಕಪ್ಪು ಬಿಳುಪು ಚಿತ್ರ ಬಂದವು. 1888 ರಲ್ಲಿ ಜಾರ್ಜ್ ಈಸ್ಟ್ ಮನ್ ಕೊಡಕ್ ಕ್ಯಾಮರಾ ಪರಿಚಯ ಮಾಡಿದನು. ಯು ಪ್ರೆಸ್ ದಿ ಬಟನ್, ವಿ ಡೂ ದಿ ರೆಸ್ಟ್ ಎಂಬ ಘೋಷಣೆಯೊಂದಿಗೆ ಜನಸಾಮಾನ್ಯರು ಫೋಟೋ ತೆಗೆದುಕೊಳ್ಳಲು ಆರಂಭ ಮಾಡಿದರು. 1975 ರಲ್ಲಿ ಕೊಡಾಕ್ ಕಂಪನಿಯ ಇಂಜಿನಿಯರ್ ಸ್ಟೀವನ್ಸಾಸನ್ ಮೊದಲು ಡಿಜಿಟಲ್ ಕ್ಯಾಮೆರಾ ನಿರ್ಮಿಸಿದರು. 1990ರಲ್ಲಿ ಡಿಜಿಟಲ್ ಕ್ಯಾಮೆರಾ ಬಂದು ಫಿಲಂ ಕ್ಯಾಮೆರಾ ನಿಧಾನವಾಗಿ ಬದಲಾದವು.

**ಇಂದು ವಿಶ್ವ ಛಾಯಾಗ್ರಾಹಕರ ದಿನ**



ಕ್ಯಾಮರಾಗಳ ವಿಶೇಷತೆ ಹೇಳುವುದಾದರೆ ಸುಮಾರು 14 ಬಗೆಯ ಫೋಟೋಗ್ರಫಿ ಇದೆ. 50ಕ್ಕೂ ಹೆಚ್ಚು ಬಗೆಯ ಉಪ ವಿಧಗಳಿವೆ. ಇದೊಂದು ವಿಸ್ಮಯ ಲೋಕ ಎನ್ನುವುದರಲ್ಲಿ ಸಂದೇಹವೇ ಇಲ್ಲ, ಪ್ರಾಕೃತಿಕ ದೃಶ್ಯ ಫೋಟೋಗ್ರಫಿ, ವ್ಯಕ್ತಿ ಫೋಟೋಗ್ರಫಿ, ವನ್ಯಜೀವಿ ಫೋಟೋಗ್ರಫಿ, ಸ್ಟ್ರೀಟ್ ಫೋಟೋಗ್ರಫಿ, ಕ್ರೀಡೆ ಫೋಟೋಗ್ರಫಿ, ಮ್ಯಾಕ್ರೋ ಫೋಟೋಗ್ರಫಿ, ಫ್ಯಾಶನ್ ಫೋಟೋಗ್ರಫಿ, ಆರ್ಕಿಟೆಕ್ಟ್ ಅಂಡ್ ಇವೆಂಟ್ ಫೋಟೋಗ್ರಾಫಿ, ಜರ್ನಲಿಸ್ಟ್ ಫೋಟೋಗ್ರಫಿ, ಏರಿಯಲ್ /ಡ್ರೋನ್ ಫೋಟೋಗ್ರಫಿ, ಅಂಡರ್ ವಾಟರ್ ಫೋಟೋಗ್ರಫಿ, ನೈಟ್ ಫೋಟೋಗ್ರಾಫಿ ಹಾಗೂ ಆಸ್ಟ್ರೋ ಫೋಟೋಗ್ರಫಿ.

**ಫೋಟೋಗ್ರಫಿಯ ಅನುಕೂಲತೆಗಳು:** ಸೃಜನಾತ್ಮಕತೆ, ಸ್ಮೃತಿ ಶಾಶ್ವತ, ಹೆಚ್ಚಿನ ಬೇಡಿಕೆ ಸ್ವ ಉದ್ಯೋಗ, ಹೊಸ ತಂತ್ರಜ್ಞಾನ ಕಲಿಯುವ ಅವಕಾಶ, ಆರ್ಥಿಕ ಲಾಭ, ಪ್ರವಾಸದ ಅವಕಾಶ, ಪ್ರಮುಖ ಕಾರ್ಯಕ್ರಮಗಳಿಗೆ ಹೋಗುವ ಅವಕಾಶ.

**ಫೋಟೋಗ್ರಫಿಯ ಅನಾನುಕೂಲಗಳು:** ಹೆಚ್ಚು ಖರ್ಚು, ಆರಂಭದಲ್ಲಿ ಕಡಿಮೆ ಆದಾಯ, ಅಸ್ಥಿರ ಕೆಲಸ, ಹೆಚ್ಚು ಸ್ಪರ್ಧೆ, ಕಠಿಣಶ್ರಮ, ಸಮಾಜದ ಒತ್ತಡ, ದೇಹದ ಒತ್ತಡ, ಇಷ್ಟೆಲ್ಲ ಇದ್ದರೂ ಫೋಟೋಗ್ರಫಿಯು ಸಮಾಜದ ಮಾನ್ಯತೆ ಹಾಗೂ ಸೃಜನಶೀಲ ವ್ಯಕ್ತಿತ್ವದ ಕೈಗನ್ನಡಿಯಾಗಿದೆ.

ಪರಮೇಶ್.ಬಿ. 9448868212

**- ಹೆಚ್.ಜಿ.** ನಾಗೇಂದ್ರ

# ಅರೆರೆರೆ ಗಿಣಿರಾಮು!



ಅರೆರೆರೆ ಗಿಣಿರಾಮು!... ಇದು ನಮ್ಮ ಮನೆಯ ಪೇರಳೆ ಮರದಲ್ಲಿನ ಕಾಯಿ, ಹಣ್ಣುಗಳನ್ನು ತಿನ್ನಲು ಗಿಳಿಗಳು ಬಂದಾಗಲೆಲ್ಲಾ ನಾನು ಗುನುಗೋ ಹಾಡು. 3-4 ಪ್ರಭೇದದ ಗಿಳಿಗಳು ಬರುತ್ತಾವಾದರೂ, ನನ್ನನ್ನು ಆಕರ್ಷಿಸಿದ್ದು ಚಿಟ್ಟು ಗಿಳಿ. ಇದನ್ನು ಚುಟ್ಟು ಗಿಳಿ, ನೇತಾಡುವ ಗಿಳಿ ಎಂದೂ, ಆಂಗ್ಲ ಭಾಷೆಯಲ್ಲಿ ಲೋರಿಕೀಟ್, ವರ್ನಲ್ ಹ್ಯಾಂಗಿಂಗ್ ಪ್ಯಾರಟ್ ಎಂದೂ ಕರೆಯುತ್ತಾರೆ.

ಪ್ರತಿಬಾರಿ ಮಳೆಗಾಲದಲ್ಲಿ ತಪ್ಪದೇ ಹಾಜರಾಗುವ ಈ ಗಿಳಿಗಳು, ತಮ್ಮ ಬಣ್ಣ, ಗಾತ್ರ, ವರ್ತನೆಯಿಂದಲೇ ಮನಸೋಲಿಸಬಲ್ಲವು. ಹೆಚ್ಚೆಂದರೆ 5-6 ಇಂಚು ಉದ್ದ, ಚಿಕ್ಕ ಬಾಲ, ಸುಂದರ ಕಣ್ಣುಗಳು, ಹಸಿರು ಬಣ್ಣದ ದೇಹ, ಕಿತ್ತಳೆ ಬಣ್ಣದ ಕೊಕ್ಕು, ಕೆಂಬಣ್ಣದ ಹಿಂಭಾಗ ಇವು ಈ ಚಿಟ್ಟು ಗಿಳಿಯ ಸಾಮಾನ್ಯ ಲಕ್ಷಣಗಳು.

ಬಾವಲಿಯಂತೆ ತಲೆಕೆಳಗಾಗಿ ಮಲಗುವ, ಕೆಲವೊಮ್ಮೆ ತಲೆಕೆಳಗಾಗಿ ಕುಳಿತುಕೊಳ್ಳುವ ಹಾಗೂ ಆಹಾರ ಸೇವಿಸುವ ಕಾರಣದಿಂದಲೇ ಇವು ಇತರ ಗಿಳಿಗಳಿಗಿಂತ ಭಿನ್ನ ಮತ್ತು ನೇತಾಡುವ ಗಿಳಿ ಎಂದು ಕರೆಯಲ್ಪಡುವುದು.

ಚಿಟ್ಟು ಗಿಳಿಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವುದು ಕಷ್ಟದ ಕೆಲಸವೇ.. ಕಾರಣ, ಇವುಗಳ ಚುರುಕಾದ ಹಾರಾಟ. ಎಲೆಹಸಿರ ಬಣ್ಣದವುಗಳೇ ಆಗಿರುವುದರಿಂದ, ಈ ಗಿಳಿಗಳನ್ನು ಎಲೆಗಳ ಮಧ್ಯೆ ಹುಡುಕುವುದೂ ಒಂತರಹದ ಸೋಜಿಗದಾಟ. ಸಣ್ಣಗೆ ಮಳೆ ಹನಿಯುತ್ತಿರುವಾಗ, ಇವುಗಳು ಕೊಂಬೆಯಿಂದ ಕೊಂಬೆಗೆ ಹಾರಿ, ಆಹಾರ ಹುಡುಕುವ ಬಗೆ, ಆಹಾರ ಸಿಕ್ಕಿದೊಡನೆ ಅತ್ತಿತ್ತ ನೋಡಿಕೊಂಡು ತಿನ್ನುವ ಪರಿ, ಮನಸ್ಸಿಗೆ ಮುದ ನೀಡುತ್ತದೆ. ಇವುಗಳು ಒಂದೆಡೆಯಿಂದ ಇನ್ನೊಂದೆಡೆಗೆ ನಡೆದಾಡುವುದೇ ಬಲು ಚೆಂದ..

ಗಿಳಿಗಳಿಗೂ ನಮಗೂ ಈ ನಂಟು ಬೆಸೆಯಲು ಕಾರಣವಾಗಿದ್ದು ನಮ್ಮ ಮನೆಯ ಪೇರಳೆ ಮರ. ಪೇರಳೆ ಹಣ್ಣು ಯಾರಿಗೆ ತಾನೇ ಇಷ್ಟವಿಲ್ಲ! ನನ್ನ ಅಮ್ಮನಿಗೆ ಪಕ್ಷಿಗಳು ಹಣ್ಣು, ಕಾಯಿ ತಿಂದರೆ ಪರವಾಗಿಲ್ಲ, ಆದರೆ ಅದಕ್ಕಿಂತಲೂ ಹೆಚ್ಚು ಇಷ್ಟ ಹಣ್ಣುಗಳನ್ನು ಕೊಯ್ದು, ಬೇರೆಯವರಿಗೆ ಕೊಡುವುದು. ಅವರು ಯಾರಾದರೂ ಸರಿ! ಕೊಡುವುದು ಅವಳ ಖುಷಿಗಾಗಿ ಅಥವಾ ಯಾರೋ ಆಸೆಪಟ್ಟರೆಂದು! ಅಕ್ಕ ಹಾಗೂ ನಾನು ಇದನ್ನು ಸಹಿಸೆವು. ಈ ಪೇರಳೆ ಹಣ್ಣುಗಳು, ಕೃತಜ್ಞತೆಯೇ ಇಲ್ಲದ, ಕೆಲವು ಬಾರಿ ಮನೆಯ ಯಾರಲ್ಲಿಯೂ ಕೇಳದೆಯೇ ಕಳ್ಳರಂತೆ ಕೊಯ್ದು ತಿನ್ನುವ ಮನುಷ್ಯರ ಪಾಲಾಗುವ ಬದಲು, ಈ ಗಿಳಿಗಳಂಥ ಮುಗ್ಧ ಜೀವಿಗಳ ಪಾಲಾಗಲಿ, ಹಣ್ಣು ಕಾಯಿಗಳ ಮೇಲೆ ನಮಗೆಷ್ಟು ಹಕ್ಕಿದೆಯೋ ಅವುಗಳಿಗೂ ಅಷ್ಟೇ ಇದೆ; ಅವುಗಳ ಪಾಲನ್ನು ಅವುಗಳೇ ತಿನ್ನಲಿ ಎನ್ನುವುದು ನಮ್ಮ ಆಶಯ. ಯೋಚಿಸಿದರೆ ಎರಡೂ ಸರಿಯೇ..! ಪ್ರತಿ ಮಳೆಗಾಲದಲ್ಲೂ ಗಿಳಿಗಳ ಸುತ್ತ ಈ ದ್ವಂದ್ವ ಆಗುತ್ತಲೇ ಇರುತ್ತವೆ. ಆದಾಗ್ಯೂ ಪ್ರತಿ ಬಾರಿ ಅವುಗಳು ಬಂದಾಗ ಮನಸ್ಸು ಅರಳುತ್ತದೆ... ಮತ್ತೆ ಅದೇ ಹಾಡು ನೆನಪಾಗಿ ಗುನುಗುತ್ತೇನೆ.... ಅರೆರೆರೆ ಗಿಣಿರಾಮು..

# ನೋಡುತ್ತಾರೆ

ಸಂಜೆ ಹೊತ್ತು ತಿನ್ನೋದಕ್ಕೆಂದಲೇ ಸಾಲು ಅಂಗಡಿಗಳು ರಸ್ತೆ ಬದಿಯಲ್ಲಿ ನಿಂತಿರುತ್ತವೆ, ಆ ದಿನ ತಾಯಿ ಮಗಳು ಆ ರಸ್ತೆ ಬದಿಯಲ್ಲಿದ್ದ ತಿಂಡಿ ತಿಂದಾದ ಮೇಲೆ ಅಮ್ಮ ಕೈಯೊರೆಸಿದ ದಿನಪತ್ರಿಕೆಯ ತುಂಡನ್ನು ಅಲ್ಲೇ ಎಸೆದುದನ್ನ ಕಂಡು ಮಗಳು ಅದೇ ಕೆಲಸವನ್ನು ಮುಂದುವರಿಸಿದಳು, ತಾಯಿ ಮಾಡಿದ್ದೆ ಸರಿ ಎಂದುಕೊಂಡಳು, ಬಸ್ಸಿನಲ್ಲಿ ಪಯಣಿಸುತ್ತಿದ್ದ ಅಪ್ಪ ಕಿಟಕಿಯ ಹೊರಗೆ ಕಾಣುವ ಜಗತ್ತನ್ನು ಕಾಣುವುದನ್ನು ಬಿಟ್ಟು ಕೈಯಲ್ಲಿದ ಮೊಬೈಲ್ ಒಳಗೆ ಮುಳುಗಿದ್ದನ್ನ ಕಂಡು ಮಗ ಅಮ್ಮನ ಕೈಯಲ್ಲಿ ಇರುವ ಮೊಬೈಲ್ ಅನ್ನು ಕಿತ್ತುಕೊಂಡು ತಾನು ಮೊಬೈಲ್ ನೋಡೋದಕ್ಕೆ ಆರಂಬಿಸಿದ, ಪ್ರತಿದಿನ ಸಂಜೆ ಆದರೆ ಸಾಕು ಶಾಲೆಯ ಪಕ್ಕದಲ್ಲಿರುವ ಕಂಪ್ಯೂಟರ್ ಆಟದ ಅಂಗಡಿಗೆ ಓಡುತ್ತಿದ್ದ ಮಗ ಈಗ ಅಪ್ಪ ಅಮ್ಮ ಪ್ರತಿದಿನ ಗ್ರಂಥಾಲಯದಲ್ಲಿ ಸಮಯ ಕಳೆಯುವುದನ್ನು ಕಂಡು ತಾನೂ ಅಭ್ಯಾಸ ಶುರುವಿಟ್ಟುಕೊಂಡಿದ್ದಾನೆ. ಶಾಲೆಗೆ ಹೋಗುತ್ತಿದ್ದ ಹುಡುಗನ ಬಾಯಲ್ಲಿ ಅಪ್ಪ-ಅಮ್ಮ ಪ್ರತಿದಿನ ರಾತ್ರಿ ಆಡುತ್ತಿದ್ದ ಕೆಟ್ಟ ಮಾತುಗಳು ದಿನವೂ ಉದುರಲು ಪ್ರಾರಂಭಿಸಿದೆ. ಮೌನದಿಂದ ಎಲ್ಲರ ಮಾತನ್ನ ಆಲಿಸುತ್ತಿದ್ದ ಅಮ್ಮನ ಗುಣವನ್ನು ಕಂಡು ಮಗಳು ಅದನ್ನೇ ಅನುಸರಿಸಿದ್ದಾಳೆ ಇದೆಲ್ಲವನ್ನು ಕಂಡಾಗ ನಮ್ಮ ದೇಶದ ಭವಿಷ್ಯ ಪ್ರಸ್ತುತ ಹೆತ್ತವರ ಕೈಯಲಿದೆ ಅವರನ್ನೇ ಅನುಸರಿಸುವ ಮಕ್ಕಳು ಮುಂದೆ ಅವರಂತೆ ಆಗಿಬಿಡುತ್ತಾರೆ ಅನ್ನೋದು ಅರ್ಥವಾಯಿತು... ಇನ್ನು ಪ್ರತೀ ದಿನ ಎಚ್ಚರವಾಗಿರಬೇಕು ಅನ್ನೋದು ರಾಜೇಶನಿಗೆ ಅರ್ಥವಾಯಿತು



**- ಧೀರಜ್** ಬೆಳ್ಳಾರೆ

## 19-8-2025 ದಿನ ಭವಿಷ್ಯ

**ಮೇಷ:** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ನಿಮ್ಮ ಹಳೆಯ ಯಾವುದೇ ರೋಗ ಇಂದು ನಿಮ್ಮನ್ನು ಕಾಡಬಹುದು. ಇದರ ಕಾರಣದಿಂದ ನೀವು ಆಸ್ಪತ್ರೆಗೂ ಹೋಗಬೇಕಾಗಬಹುದು ಮತ್ತು ನಿಮ್ಮ ಸಾಕಷ್ಟು ಹಣವು ಸಹ ಖರ್ಚು ಆಗಬಹುದು.

**ವೃಷಭ:** ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು ನಿಮ್ಮ ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವುದರಿಂದ ನಿಮ್ಮ ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ. ದುಷ್ಟತೆಯು ಒಳಿತಿಗಿಂತ ಬೇಗ ವಿಜಯ ಸಾಧಿಸುತ್ತದೆಂದು ನೆನಪಿಡಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ.

**ಮಿಥುನ:** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು ಮತ್ತು ಈ ಕೌಶಲ್ಯವನ್ನು ಕಲಿತು ನೀವು ನಿಮ್ಮ ಹಣವನ್ನು ಉಳಿಸಬಹುದು. ಕುಟುಂಬದ ಪರಿಸ್ಥಿತಿ ಇಂದು ನೀವು ಯೋಚಿಸುವ ಹಾಗೆ ಇರುವುದಿಲ್ಲ.

**ಕರ್ಕಾಟಕ:** ನಿಮ್ಮ ಆರೋಗ್ಯದ ಸಲುವಾಗಿಯಾದರೂ ಕೂಗಬೇಡಿ. ನೀವು ನಿಮ್ಮ ಇಂದಿನ ದಿನವನ್ನು ಉತ್ತಮಗೊಳಿಸಲು ಕಳೆದ ದಿನಗಳಲ್ಲಿ ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು. ನಿಮ್ಮ ಸಂಗಾತಿಯೊಡನೆ ಒಂದು ಉತ್ತಮ ತಿಳುವಳಿಕೆ ಮನೆಯಲ್ಲಿ ಸಂತೋಷ-ಶಾಂತಿ ಮತ್ತು ಸಮೃದ್ಧಿಯನ್ನು ತರುತ್ತದೆ.

**ಸಿಂಹ:** ಪ್ರೀತಿ, ಭರವಸೆ, ನಂಬಿಕೆ, ಸಹಾನುಭೂತಿ, ಆಶಾವಾದ ಮತ್ತು ನಿಷ್ಠೆಗಳಂಥ ಧನಾತ್ಮಕ ಭಾವನೆಗಳನ್ನು ಗ್ರಹಿಸಲು ಮನಸ್ಸನ್ನು ಪ್ರೋತ್ಸಾಹಿಸಿ. ಒಮ್ಮೆ ಈ ಭಾವನೆಗಳು ಸಂಪೂರ್ಣವಾಗಿ ಹತೋಟಿಗೆ ತೆಗೆದುಕೊಂಡ ನಂತರ ಮನಸು ತಾನಾಗಿಯೇ ಪ್ರತಿ ಪರಿಸ್ಥಿತಿಗೂ ಧನಾತ್ಮಕವಾಗಿ ಪ್ರತಿಕ್ರಿಯಿಸುತ್ತದೆ. ಪ್ರವಾಸದ ಅವಕಾಶಗಳನ್ನು ಪರಿಶೋಧಿಸಬೇಕು.

ಕನ್ಯಾ: ನೀವು ಚೈತನ್ಯದಿಂದ ತುಂಬಿರುತ್ತೀರಿ ಮತ್ತು ಇಂದು ಅಸಾಮಾನ್ಯವಾದದ್ದೇನಾದರೂ ಸಾಧಿಸುತ್ತೀರಿ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ.

ತುಲಾ: ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ನಿಮ್ಮ ಸಂಗಾತಿಯ ಇಂದು ಅವರ ಕೆಲಸದಲ್ಲಿ ಮುಳುಗಿಹೋಗಬಹುದು.

**ವೃಶ್ಚಿಕ:** ನೀವು ವ್ಯಾಯಾಮದ ಮೂಲಕ ನಿಮ್ಮ ತೂಕವನ್ನು ನಿಯಂತ್ರಿಸಬಹುದು. ಹಣ ನಿಮ್ಮ ಕೈಗಳ ಮೂಲಕ ಸುಲಭವಾಗಿ ಜಾರಿಹೋದರೂ - ನಿಮ್ಮ ಅದೃಷ್ಟದ ತಾರೆಗಳು ನಿಮಗೆ ಹಣಕಾಸು ಸುಲಭವಾಗಿ ದೊರಕುವಂತೆ ಮಾಡುತ್ತದೆ. ಕೆಲವರಿಗೆ ಕುಟುಂಬದಲ್ಲಿ ಒಂದು ಹೊಸ ಆಗಮನ ಸಂಭ್ರಮಾಚರಣೆ ಮತ್ತು ಆನಂದದ ಕ್ಷಣಗಳನ್ನು ತೆರೆದಿಡುತ್ತದೆ.

**ಧನು:** ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ಆರ್ಥಿಕ ಸಮಸ್ಯೆ ರಚನಾತ್ಮಕವಾಗಿ ಯೋಚಿಸುವ ನಿಮ್ಮ ಸಾಮರ್ಥ್ಯವನ್ನು ಹಾಳುಮಾಡುತ್ತದೆ. ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ. ಪ್ರಣಯದ ನೆನಪುಗಳು ನಿಮ್ಮ ದಿನವನ್ನು ಆಕ್ರಮಿಸುತ್ತವೆ. ಇತರರು ನಿಮ್ಮ ತುಂಬಾ ಸಮಯ ತೆಗೆದುಕೊಳ್ಳಬಹುದು.


**ಮಕರ:** ನಿಮ್ಮ ಸಂಗಾತಿಯ ಆರೋಗ್ಯ ಒತ್ತಡ ಮತ್ತು ಆತಂಕಕ್ಕೆ ಕಾರಣವಾಗಬಹುದು. ಬುದ್ಧಿವಂತಿಕೆಯಿಂದ ಹೂಡಿಕೆ ಮಾಡಿ. ನಿಮ್ಮ ಸಂಗಾತಿಯೊಡನೆ ಒಂದು ಉತ್ತಮ ತಿಳುವಳಿಕೆ ಮನೆಯಲ್ಲಿ ಸಂತೋಷ-ಶಾಂತಿ ಮತ್ತು ಸಮೃದ್ಧಿಯನ್ನು ತರುತ್ತದೆ. ನೀವು ಹಂಚಿಕೊಂಡ ಉತ್ತಮ ಸಮಯವನ್ನು ನೆನಪಿಸಲು ನಿಮ್ಮ ಸ್ನೇಹವನ್ನು ನೆನಪು ಮಾಡಿಕೊಳ್ಳುವ ಸಮಯ.

**ಕುಂಭ:** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಇವು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ ಕುಟುಂಬದಲ್ಲಿ ನಿಮ್ಮ ಸರ್ವಾಧಿಕಾರಿ ಧೋರಣೆಯನ್ನು ಬದಲಾಯಿಸಿಕೊಳ್ಳಲು ಇದು ಒಳ್ಳೆಯ ಸಮಯ. ಜೀವನದ ಏಳುಬೀಳುಗಳನ್ನು ಹಂಚಿಕೊಳ್ಳಲು ಅವರ ಸಹಕಾರದೊಂದಿಗೆ ಕೆಲಸ ಮಾಡಿ.

**ಮೀನ:** ಮಾನಸಿಕ ಶಾಂತಿಗಾಗಿ ನಿಮ್ಮ ಒತ್ತಡವನ್ನು ಪರಿಹರಿಸಿ. ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು, ನೀವು ಈ ಸಲಹೆಯನ್ನು ಅನುಸರಿಸಿದರೆ, ನೀವು ಖಂಡಿತವಾಗಿಯೂ ಹಣವನ್ನು ಗಳಿಸುವಿರಿ. ಸಂಜೆ ಸ್ನೇಹಿತರೊಡನೆ ಹೋಗಿ, ಇದು ತುಂಬ ಒಳ್ಳೆಯದನ್ನು ಮಾಡುತ್ತದೆ.

# ಅಡುಗೆಮನೆಯಿಂದ ಅಡಿಯಿಟ್ಟ ಅಡೀಡಸ್

**ಅಡೀಡಸ್ ಹೆಸರು ಕೇಳದವರು ಬಹಳ ಕಡಿಮೆ. ಅದರಲ್ಲೂ ಕ್ರೀಡಾ ವಲಯದಲ್ಲಿ ಇದು ಜನಪ್ರಿಯ ಹೆಸರು. ಮೂಲತಃ ಪಾದರಕ್ಷೆಗಳನ್ನು ತಯಾರಿಸುತ್ತಿದ್ದ ಈ ಸಂಸ್ಥೆ ಇತ್ತೀಚಿನ ವರ್ಷಗಳಲ್ಲಿ ಕ್ರೀಡಾ ಪಟುಗಳಿಗೆ ಬೇಕಾಗುವ ಉಡುಪುಗಳನ್ನೂ, ಕ್ರೀಡಾ ಸಾಮಗ್ರಿಗಳನ್ನೂ ತಯಾರಿಸುವುದಷ್ಟೇ ಅಲ್ಲ, ಅವು ಜನಪ್ರಿಯವೂ ಆಗಿವೆ.**



ನಿಮಗೆ ಖುಷಿ ಖರೀದಿಸಲು ಸಾಧ್ಯವಿಲ್ಲದಿದ್ದರೆ ಏನಂತೆ? ಖುಷಿ ಕೊಡುವ ಪಾದರಕ್ಷೆ ಖರೀದಿಸ ಬಹುದಲ್ಲ? ಎಂಬ ಮಾತಿದೆ. ನಿಮ್ಮ ಪಾದರಕ್ಷೆಯ ಆಯ್ಕೆ ನಿಮಗೇ ಬಿಟ್ಟಿದ್ದು. ನನ್ನ ಕಳಕಳಿಯ ವಿನಂತಿ ಒಂದೇ, ನೀವು ಧರಿಸುವ ಉಡುಗೆಗೆ ತಕ್ಕಂತೆ ಪಾದರಕ್ಷೆ ಧರಿಸಿ. ಕೋಟು, ಪ್ಯಾಂಟಿನ ಮೇಲೆ ಹವಾಯಿ ಚಪ್ಪಲ್ ತೊಡುವುದಾಗಲಿ, ಶೇರವಾನಿ, ಕುರ್ತಾ ಪೈಜಾಮಾ ಮೇಲೆ ಕ್ಯಾನ್ವಾಶ್ ಶೂ ತೊಡುವುದಾಗಲಿ ಮಾಡಬೇಡಿ. ಯಾವುದಕ್ಕೂ ನಿಮ್ಮ ಪಾದರಕ್ಷೆ ನಿಮ್ಮ ಕಾಲನ್ನು ರಕ್ಷಿಸುವಂತಿರಲಿ, ಮುದ ನೀಡುವಂತಿರಲಿ, ಹಿತವಾಗಿರಲಿ.

ಅಡೀಡಸ್ ಹೆಸರು ಕೇಳದವರು ಬಹಳ ಕಡಿಮೆ. ಅದರಲ್ಲೂ ಕ್ರೀಡಾ ವಲಯದಲ್ಲಿ ಇದು ಜನಪ್ರಿಯ ಹೆಸರು. ಮೂಲತಃ ಪಾದರಕ್ಷೆಗಳನ್ನು ತಯಾರಿಸುತ್ತಿದ್ದ ಈ ಸಂಸ್ಥೆ ಇತ್ತೀಚಿನ ವರ್ಷಗಳಲ್ಲಿ ಕ್ರೀಡಾ ಪಟುಗಳಿಗೆ ಬೇಕಾಗುವ ಉಡುಪುಗಳನ್ನೂ, ಕ್ರೀಡಾ ಸಾಮಗ್ರಿಗಳನ್ನೂ ತಯಾರಿಸುವುದಷ್ಟೇ ಅಲ್ಲ, ಅವು ಜನಪ್ರಿಯವೂ ಆಗಿವೆ.

ರಷ್ಯಾ, ಉತ್ತರ ಕೊರಿಯಾ, ಅಫ್ಘಾನಿಸ್ತಾನ, ದಕ್ಷಿಣ ಸುಡಾನ್, ಪ್ಯಾಲೆಸ್ತೀನ್, ಟರ್ಕ್‌ಮನಿಸ್ತಾನ್ ಮತ್ತು ಚಾಡ್ ದೇಶಗಳನ್ನು ಹೊರತುಪಡಿಸಿದರೆ, ಇಂದು ವಿಶ್ವದ ಎಲ್ಲ ದೇಶಗಳಲ್ಲೂ ತನ್ನ ಅಸ್ತಿತ್ವ ಸ್ಥಾಪಿಸಿಕೊಂಡಿರುವ ಸಂಸ್ಥೆ ಇದು. ಸುಮಾರು 60000 ಜನರಿಗೆ ಉದ್ಯೋಗಾವಕಾಶವನ್ನೂ ಒದಗಿಸಿದೆ.

ಸುಮಾರು ಒಂದು ವರ್ಷದ ಹಿಂದೆ ಸ್ನೇಹಿತರೊಬ್ಬರ ಜತೆ ಪಾದರಕ್ಷೆಯ ಕುರಿತು ಮಾತಾಡುತ್ತಿರುವಾಗ ಅದಿದಾಸ್ ಯಾನೆ ಅಡೀಡಸ್ ವಿಷಯ ಚರ್ಚೆಗೆ ಬಂತು. ನಿಜವಾಗಿ ಆ ಸಂಸ್ಥೆಯ ಹುಟ್ಟು, ಸಂಘರ್ಷ, ಬೆಳವಣಿಗೆ ಇತ್ಯಾದಿಗಳ ಕುರಿತು ಹೆಚ್ಚಿನ ಚರ್ಚೆಯಾಗಬೇಕಿತ್ತು. ಆದರೆ ಅಡೀಡಸ್ ಎಂಬ ಹೆಸರು ಹೇಗೆ ಬಂತು? ಅದರ ಸರಿಯಾದ ಉಚ್ಚಾರ ಹೇಗೆ? ಅದರ ಸರಿಯಾದ ಲೋಗೋ ಯಾವುದು? ಎನ್ನುವುದರ ಕುರಿತಾಗಿಯೇ ಹೆಚ್ಚು ಚರ್ಚೆಯಾಯಿತು.

ನನ್ನ ಸ್ನೇಹಿತನ ಪ್ರಕಾರ, ಅಡೀಡಸ್ ಎನ್ನುವುದು ದಿನವಿಡೀ ನಾನು ಕ್ರೀಡೆಗಳ ಬಗ್ಗೆ ಕನಸು ಕಾಣುತ್ತೇನೆ ಎನ್ನುವ ಸಾಲಿನಲ್ಲಿ ಬರುವ ಎಲ್ಲ ಮೊದಲ ಅಕ್ಷರಗಳನ್ನು ಸೇರಿಸಿ ಮಾಡಿದ ಪದ. ಬಹಳ ವರ್ಷಗಳವರೆಗೆ ನಾನೂ ಅದೇ ಸರಿ ಎಂದು ನಂಬಿದ್ದೆ. ಆ ರೀತಿಯ ಒಂದು ಟ್ರೆಂಡ್ ಇದ್ದದ್ದು ಸುಳ್ಳಲ್ಲ. ಆದರೆ ಎಲ್ಲ ವಿಷಯದಲ್ಲೂ ಅದು ಸತ್ಯವೂ ಅಲ್ಲ.

ಇತ್ತೀಚೆಗೆ ನ್ಯೂಸ್ ಎನ್ನುವುದು ಉತ್ತರ-ಪೂರ್ವ-ಪಶ್ಚಿಮ-ದಕ್ಷಿಣದಿಂದ ಬಂದದ್ದು, ನ್ಯೂಸ್ ಅಥವಾ ಸುದ್ದಿ, ಭೂಮಿಯ ನಾಲ್ಕೂ ದಿಕ್ಕಿನ ವಿಷಯವನ್ನು ತಿಳಿಸುತ್ತದೆ, ಅದಕ್ಕಾಗಿ ಈ ಹೆಸರು ಎಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿತ್ತು. ಇದು ಎಷ್ಟು ಹುಸಿಯೋ, ಅಡೀಡಸ್ ಹೆಸರಿನ ಹಿಂದಿನ ತರ್ಕವೂ ಅಷ್ಟೇ ಮಿಥ್ಯ. ಇನ್ನು ಲೋಗೋ ವಿಷಯ. ಅಡೀಡಸ್ ಸಂಸ್ಥೆಯ ಮೂರು ವಿಧದ ಲೋಗೋ ಅಥವಾ ಲಾಂಛನವನ್ನು ನೀವು ನೋಡಿರುತ್ತೀರಿ.

ಮೂರು ದಳದ ಹೂವಿನ ಆಕಾರದ ನಡುವೆ ಮೂರು ಗೆರೆಗಳು, ತ್ರಿಕೋನಾಕಾರದಲ್ಲಿ ಮೂರು ಗೆರೆಗಳು ಮತ್ತು ವೃತ್ತಾಕಾರದ ಮಧ್ಯದಲ್ಲಿ ಮೂರು ಗೆರೆಗಳು. ಈ ಮೂರೂ ಸಂಸ್ಥೆಯ ಅಧಿಕೃತ ಲಾಂಛನಗಳೇ. ಕಾಲಕ್ಕೆ ತಕ್ಕಂತೆ ಅವು ಬದಲಾದವು ಅಷ್ಟೇ. ಹಾಗೆಯೇ ಅದರ ಉಚ್ಚಾರ.

ಮೂಲತಃ ಇದು ಜರ್ಮನ್ ಪದ. ಯಾರು ಮಾಡಿದರೋ, ಹೇಗಾಯಿತೋ ಗೊತ್ತಿಲ್ಲ, ಜರ್ಮನ್ ಭಾಷೆಯ ಅದಿದಾಸ್ ಕನ್ನಡಕ್ಕೆ ಬರುವಾಗ ಅಡೀಡಸ್ ಆಗಿತ್ತು. ಅದೋಲ್ ಹಿಟ್ಲರ್ (ಹಿಟ್ಲರ್‌ನ ಇಲ್ಲಿ ಗೌಣ) ಕನ್ನಡಕ್ಕೆ ಬರುವಾಗ ಅಡಾಲ್ ಹಿಟ್ಲರ್ ಆದಂತೆ. ಅದು ಬಿಡಿ, ಅಡೀಡಸ್ ಹೆಸರು ಬಂದದ್ದು ಹೇಗೆ? ಅದನ್ನು ತಿಳಿಯಬೇಕು, ಅದಕ್ಕೂ ಮೊದಲು ಅಡೀಡಸ್‌ನ ಸಂಘರ್ಷ ಗಾಥೆಯನ್ನು ತಿಳಿಯಬೇಕು.

1900ರ ಸೆಪ್ಟೆಂಬರ್‌ನಲ್ಲಿ ಜರ್ಮನಿಯ ಬವೇರಿಯನ್ ಪ್ರಾಂತ್ಯದಲ್ಲಿ ಹುಟ್ಟಿದ ಅದಾಲ್ ದಾಸ್ಲರ್‌ನನ್ನು ಜನ ಅದಿ ಎಂದೂ ಕರೆಯುತ್ತಿದ್ದರು. ತಂದೆ ಪಾದರಕ್ಷೆ ತಯಾರಿಸುವ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ತಾಯಿ ಮನೆ ಕೆಲಸದೊಂದಿಗೆ ಹೊಲಿಗೆ ಕೆಲಸ ಮಾಡಿಕೊಂಡಿದ್ದಳು. ಅದಾಲ್‌ನಿಗೆ ರುದಾಲ್ ಹೆಸರಿನ ಒಬ್ಬ ಸಹೋದರನೂ ಇದ್ದ. ಈತನೇ ಮುಂದೊಂದು ದಿನ ಪೂಮಾ ಪಾದರಕ್ಷೆ ತಯಾರಿಸುವ ಸಂಸ್ಥೆಯನ್ನು ಹುಟ್ಟುಹಾಕಿದ.

ಇದು ಸಹೋದರರೇ ಒಬ್ಬರಿಗೊಬ್ಬರು ಪ್ರತಿಸ್ಪರ್ಧಿಗಳಾದ ಮೊದಲ ಕ್ರೂರಕಥೆ ಎಂದರೂ ತಪ್ಪಲ್ಲ. ಇಬ್ಬರೂ ಪಾದರಕ್ಷೆಯ ಕ್ಷೇತ್ರದಲ್ಲಿ ಹೆಸರು ಮಾಡಿ ವಿಶ್ವದಾದ್ಯಂತ ತಮ್ಮ ಛಾಪು ಮೂಡಿಸಿದರು ಎನ್ನುವುದೊಂದೇ ಸಮಾಧಾನ. ಸಹೋದರರಲ್ಲಿ ಕಿರಿಯವನಾದ ಅದಾಲ್ ಸಣ್ಣ ವಯಸ್ಸಿನಲ್ಲೇ ಜರ್ಮನಿಯ ಸೇನೆಗೆ ಸೇರಿಕೊಂಡಿದ್ದ. ಆಗಷ್ಟೇ ಮೊದಲ ವಿಶ್ವಯುದ್ಧ ಮುಗಿದಿತ್ತು. ಆಗ ಅವನಿನ್ನೂ ಇಪ್ಪತ್ತು ವರ್ಷದ ಯುವಕ.


ಯುದ್ಧದಿಂದ ಹಿಂತಿರುಗಿ ಬಂದ ನಂತರ ಮನೆಯ ಮುಂದೆ ಒಂದು ಸಣ್ಣ ಬೇಕರಿ ಆರಂಭಿಸಬೇಕು ಎಂದು ಯೋಚಿಸಿದ. ಹಣದ ಅಭಾವ ಮತ್ತು ಇತರ ಮನೆಯಲ್ಲಿಯೇ ಪಾದರಕ್ಷೆ ತಯಾರಿಸಲು ನಿರ್ಧರಿಸಿದ. ಹೇಗಿದ್ದರೂ ಅಪ್ಪ, ಚಿಕ್ಕಪ್ಪ ಅದೇ ವೃತ್ತಿಯಲ್ಲಿದ್ದರಲ್ಲ, ತಂದೆಯ ಸಹಕಾರ, ಮಾರ್ಗದರ್ಶನವೂ ಅವನಿಗೆ ದೊರಕಿತು. ಆದರೆ ಸಣ್ಣ ಮನೆಯಾದದ್ದರಿಂದ ಪಾದರಕ್ಷೆ ತಯಾರಿಸಲು ಸ್ಥಳವಿರಲಿಲ್ಲ.



ಮೊದಲು ಒಂದಷ್ಟು ದಿನ ಅಮ್ಮನ ಜತೆ ಅಡುಗೆಮನೆಯಲ್ಲಿ ಕುಳಿತು ಅಲ್ಲಿಯೇ ಪಾದರಕ್ಷೆ ತಯಾರಿಸಲು ಆರಂಭಿಸಿದ. ಕೆಲವು ದಿನಗಳ ನಂತರ ಅಮ್ಮ ಅವನಿಗೆ ಬಟ್ಟೆ ತೊಳೆಯುವ ಜಾಗದಲ್ಲಿಯೇ ಒಂದು ಸ್ಥಳ ಮಾಡಿಕೊಟ್ಟಳು. ನಾಲ್ಕು ವರ್ಷವಾಗುವಷ್ಟರಲ್ಲಿ ಅಣ್ಣನೂ ಅವನೊಂದಿಗೆ ಸೇರಿಕೊಂಡ. 1924ರ ವೇಳೆಗೆ ಸಣ್ಣ ಕಟ್ಟಡವೊಂದರಲ್ಲಿ ದಾಸ್ಲರ್ ಬ್ರದರ್ಸ್ ಶೂ ಫ್ಯಾಕ್ಟರಿ ಹೆಸರಿನಲ್ಲಿ, ಕ್ರೀಡಾಪಟುಗಳಿಗೆ ಬೇಕಾಗುವ ಪಾದರಕ್ಷೆ ತಯಾರಿಸಲು ಆರಂಭಿಸಿದರು.

ಸಣ್ಣ ಪುಟ್ಟ ಯಂತ್ರಗಳನ್ನು ತಂದು ಬೂಟು ತಯಾರಿಸಲು ಆರಂಭಿಸಿದ್ದು ಹೌದಾದರೂ ಸಾಕಷ್ಟು ಸಂಘರ್ಷ ಎದುರಿಸಬೇಕಾಯಿತು. ಹೇಳಿ ಕೇಳಿ ಇಪ್ಪತ್ತು ಸಾವಿರದಷ್ಟು ಜನಸಂಖ್ಯೆ ಹೊಂದಿದ್ದ ಊರಿನಲ್ಲಿ ಆಗಾಗ ವಿದ್ಯುತ್ ವ್ಯತ್ಯಯ ಉಂಟಾಗುತ್ತಿತ್ತು. ಆಗ ಸೈಕಲ್‌ನ ಗಾಲಿ ತಿರುಗಿಸಿ, ವಿದ್ಯುತ್ ಉತ್ಪಾದಿಸಿ ಸಹೋದರರು ಕೆಲಸ ಪೂರೈಸುತ್ತಿದ್ದರು.

ಕ್ರೀಡಾಪಟುಗಳಿಗೆ ಅನುಕೂಲವಾಗಲು ಪಾದರಕ್ಷೆಯಲ್ಲಿ ಸಾಕಷ್ಟು ಪ್ರಯೋಗಗಳನ್ನು ಸಹೋದರರು ಮಾಡಿದರು. ಮೊದಲೆಲ್ಲ ಬರುತ್ತಿದ್ದ ಬೂಟುಗಳಿಗಿಂತ ಹಗುರವಾಗಿಸಲು ಶ್ರಮಿಸಿದರು. ಓಡುವಾಗ ಜಾರಿ



ಏನೇ ಪ್ರಯೋಗ ಮಾಡಿದರೂ, ಸಂಸ್ಥೆ ಆರಂಭವಾಗಿ ಹನ್ನೆರಡು ವರ್ಷವಾದರೂ ಹೇಳಿಕೊಳ್ಳುವಂಥ ಏಳ್ಗೆ ಕಂಡಿರಲಿಲ್ಲ. 1936ರಲ್ಲಿ ಜರ್ಮನಿಯ ರಾಜಧಾನಿ ಬರ್ಲಿನ್‌ನಲ್ಲಿ ಒಲಿಂಪಿಕ್ ಪಂದ್ಯಾಟವನ್ನು ಏರ್ಪಡಿಸಲಾಗಿತ್ತು. ಆ ವರ್ಷ ಅದಿದಾಸ್‌ನ ದಿಕ್ಕು ಬದಲಾಯಿತು. ಆ ವರ್ಷ ಒಲಿಂಪಿಕ್‌ನಲ್ಲಿ ಭಾಗವಹಿಸಲು ಅಮೆರಿಕದಿಂದ ಬಂದಿದ್ದ ಓಟಗಾರ ಜೆಸ್ಸಿ ಓವೆನ್ಸ್‌ನನ್ನು ಭೇಟಿಯಾಗಿ ತಾವು ತಯಾರಿಸಿದ ಬೂಟನ್ನು ಕೊಟ್ಟರು.

ಅದಿದಾಸ್ ಬೂಟು ಧರಿಸಿ ಓಡಿದ ಓವೆನ್ಸ್ ಆ ವರ್ಷ ನಾಲ್ಕು ಚಿನ್ನದ ಪದಕ ಗೆದ್ದಿದ್ದ. ಇದು ಜರ್ಮನಿ ಮತ್ತು ಅಮೆರಿಕದಲ್ಲಿ ದೊಡ್ಡ ಸುದ್ದಿಯಾಯಿತು. ಅಂದಿನಿಂದ ಸಂಸ್ಥೆ ಪ್ರತಿ ವರ್ಷ 2 ಲಕ್ಷಕ್ಕೂ ಹೆಚ್ಚು ಬೂಟುಗಳನ್ನು ಮಾರಾಟ ಮಾಡುವಂತಾಯಿತು. ಅಷ್ಟೇ ಅಲ್ಲ, ಆ ಕಾಲದಲ್ಲಿ ಜರ್ಮನಿಯಲ್ಲಿ ಕ್ರೀಡಾಪಟುಗಳಿಗೆಂದೇ ಪಾದರಕ್ಷೆ ತಯಾರಿಸುವ ಏಕಮಾತ್ರ ಸಂಸ್ಥೆ ಅದಾಗಿತ್ತು.

ಅದಾಗಲೇ ಸಹೋದರರಿಬ್ಬರೂ ಜರ್ಮನಿಯ ನಾಜಿ ಪಕ್ಷವನ್ನು ಸೇರಿಕೊಂಡು, ನಾಜಿ ಯುವಪಡೆಯೊಂದಿಗೆ ಕೆಲಸವನ್ನೂ ಮಾಡುತ್ತಿದ್ದರು. ಎರಡನೆಯ ಮಹಾಯುದ್ಧ ಆರಂಭವಾದಾಗ ನಾಜಿ ಪಡೆ ಇವರ ಕಾರ್ಖಾನೆಯಲ್ಲಿ ಬೂಟು ತಯಾರಿಸುವುದನ್ನು ನಿಲ್ಲಿಸಿ ಯುದ್ಧದ ಟ್ಯಾಂಕರ್ ಧ್ವಂಸ ಗೊಳಿಸಲು ಬಳಸುವ ರಾಕೆಟ್ ಲಾಂಚರ್ ತಯಾರಿಸಲು ಆರಂಭಿಸಿತು.

ರುಡಿ ಸೇನೆಗೆ ಬೇಕಾಗುವ ಬೂಟು ತಯಾರಿಸಿಕೊಡುವುದಾಗಿ ಕೇಳಿಕೊಂಡರೂ ನಾಜಿ ಪಡೆ ಒಪ್ಪಲಿಲ್ಲ. ಯುದ್ಧ ಮುಗಿದು ಅಮೆರಿಕದ ಸೇನಾಪಡೆ ಈ ಕ್ಷೇತ್ರವನ್ನು ತನ್ನ ಹದ್ದುಬಸ್ತಿನಲ್ಲಿ ತೆಗೆದುಕೊಂಡ ನಂತರ ಇದು ನಿಂತಿತು. ಆ ಸಂದರ್ಭದಲ್ಲಿ ಕೆಲವು ದಿನ ಇಬ್ಬರೂ ಸಹೋದರರನ್ನು ಅಮೆರಿಕ ವಿಚಾರಣೆಗೆಂದು ತನ್ನ ಸುಪರ್ದಿಯಲ್ಲಿ ಇಟ್ಟುಕೊಂಡು, ನಂತರ ಬಿಟ್ಟು ಕಳುಹಿಸಿತ್ತು.

ಈ ನಡುವೆ ಸಹೋದರರ ನಡುವೆ ಯಾವುದೋ ಕಾರಣಕ್ಕೆ ಘೋರ ಮನಸ್ತಾಪ ಉಂಟಾಯಿತು. ಪರಿಣಾಮವಾಗಿ 1947ರಲ್ಲಿ ಅದಿ, ತನ್ನ ಹೆಸರಿನ ಅದಿಯ ಜತೆಗೆ ಪರಿವಾರದ ಹೆಸರು ದಾಸ್ಲರ್ನ ದಾಸ್ ಸೇರಿಸಿ ಅದಿದಾಸ್ ಎಂಬ ಹೆಸರಿನ ಸಂಸ್ಥೆ ಆರಂಭಿಸಿದ.

ಅದಿದಾಸ್ ಹೆಸರು ಬಂದದ್ದು ಹಾಗೆ, ಹೊರತು ಆಲ್ ಡೇ ಐ ಡ್ರೀಮ್ ಅಬೌಟ್ ಸ್ಪೋರ್ಟ್ಸ್ ಎಂದಲ್ಲ. ಇನ್ನೊಬ್ಬ ಸಹೋದರ ರುಡಿ ಕೂಡ ರುದಾ ಹೆಸರಿನ ಸಂಸ್ಥೆ ಸ್ಥಾಪಿಸಿದ. ಮುಂದೆ ಇದಕ್ಕೆ ಪ್ಯೂಮಾ ಎಂದು ಮರುನಾಮಕರಣ ಮಾಡಿದ.

ಸಹೋದರರ ನಡುವಿನ ಭಿನ್ನಾಭಿಪ್ರಾಯಕ್ಕೆ ನಿಜಕಾರಣ ಏನು ಎಂಬುದು ಇಂದಿಗೂ ದೊಡ್ಡ ಪ್ರಶ್ನೆಯಾಗಿಯೇ ಉಳಿದಿದೆ. ಆದರೆ ಅವರ ನಡುವೆ ವೈರತ್ವ ಎಷ್ಟರ ಮಟ್ಟಿಗೆ ಇತ್ತು ಎಂದರೆ, ಊರಿನಲ್ಲಿ ಎರಡು ಪಂಗಡಗಳೇ ಆದವು. ಒಂದು ಅದಿದಾಸ್ ಅಭಿಮಾನಿಯಾದರೆ ಇನ್ನೊಂದು ಪಂಗಡ ಪ್ಯೂಮಾವನ್ನು ಬೆಂಬಲಿಸುತ್ತಿತ್ತು. ಊರಿನಲ್ಲಿದ್ದ ಎರಡು ಫುಟ್‌ಬಾಲ್ ಕ್ಲಬ್‌ಗಳಲ್ಲಿ ಒಂದು ಅದಿದಾಸ್ ಬಳಸಿದರೆ ಇನ್ನೊಂದು ಪ್ಯೂಮಾ ಬಳಸುತ್ತಿತ್ತು.

ತಮ್ಮ ಬಳಿ ಬಂದವರು ಅದಿದಾಸ್ ಬೂಟು ತೊಟ್ಟಿದ್ದು ಕಂಡರೆ ರುದಾಲ್, ಪ್ಯೂಮಾ ಬೂಟನ್ನು ಪುಕ್ಕಟೆಯಾಗಿ ಅವರಿಗೆ ಕೊಟ್ಟು ಕಳಿಸುತ್ತಿದ್ದ. ಕೆಲವು ಆಟಗಾರರು ಪ್ಯೂಮಾ ಅಂಗಡಿಗೆ ಹೋಗುವಾಗ ಅಥವಾ ರುದಿಯನ್ನು ಭೇಟಿಯಾಗಲು ಹೋಗುವಾಗ ಬೇಕೆಂದೇ ಅದಿದಾಸ್ ಬೂಟು ಧರಿಸಿ ಹೋಗುತ್ತಿದ್ದರಂತೆ! ಸಾಲದು ಎಂಬಂತೆ ಕೊನೆಯಲ್ಲಿ ಮರಣದ ನಂತರವೂ ಅವರ ಸಮಾಧಿಯನ್ನು ಒಂದೇ ಸ್ಮಶಾನದಲ್ಲಿ ಮಾಡಿದರೂ ಸಾಕಷ್ಟು ದೂರ ದೂರದಲ್ಲಿ ಮಾಡಿದರಂತೆ.

ಅವರ ಮರಣಾನಂತರ ಸಂಸ್ಥೆಯಲ್ಲಿ ನಡೆದದ್ದೆಲ್ಲ ಪಕ್ಕಾ ವ್ಯವಹಾರದ ವಿಷಯ. ಇಂದು ಅದಿದಾಸ್‌ನೊಂದಿಗೆ ಪ್ಯೂಮಾ ಕೂಡ ವಿಶ್ವದಾದ್ಯಂತ ಸಾಕಷ್ಟು ಹೆಸರು ಮಾಡಿದ ಸಂಸ್ಥೆ. ಆದರೆ ಈ ಎರಡೂ ದಿಗ್ಗಜ ಸಂಸ್ಥೆಗಳು ಒಂದೇ ಕುಟುಂಬದಿಂದ ಬಂದಂಥವು. ಒಂದೇ ಮನೆಯಲ್ಲಿ ಹುಟ್ಟಿಕೊಂಡ ಸಂಸ್ಥೆಗಳು. ಆದರೂ ಒಂದಕ್ಕೊಂದು ಟಕ್ಕರ್ ಕೊಟ್ಟಿಕೊಂಡೇ ಬೆಳೆದು ನಿಂತವು.

ನಂತರದ ದಿನಗಳಲ್ಲಿ ಅದಿದಾಸ್‌ಗೆ ಪ್ಯೂಮಾ ಒಂದೇ ಅಲ್ಲ, ರೀಬಾಕ್ ಸಂಸ್ಥೆಯೊಂದಿಗೂ ಸಾಕಷ್ಟು ಪೈಪೋಟಿ ನಡೆಸಬೇಕಾಯಿತು. ಬೇರೆ ಬೇರೆ ಸಂಸ್ಥೆಗಳು ಮಾರುಕಟ್ಟೆಯನ್ನು ಪ್ರವೇಶಿಸಿದ್ದರಿಂದ ಅದಿದಾಸ್ ಸಾಕಷ್ಟು ನಷ್ಟವನ್ನೂ ಅನುಭವಿಸಬೇಕಾಯಿತು. ಆದರೂ ಇಂದು ಅದಿದಾಸ್ ಯಾನೆ ಅಡೀಡಸ್ ಸಂಸ್ಥೆ 21 ಬಿಲಿಯನ್ ಅಮೆರಿಕನ್ ಡಾಲರ್‌ಗೂ ಹೆಚ್ಚಿನ ಆದಾಯ ಹೊಂದಿದ್ದು, 16 ಬಿಲಿಯನ್ ಡಾಲರ್‌ಗೂ ಹೆಚ್ಚಿನ ಮೌಲ್ಯದ ಆಸ್ತಿ ಹೊಂದಿದೆ.

ಪ್ರತಿವರ್ಷ ಹೆಚ್ಚು ಕಮ್ಮಿ ಎರಡು ಬಿಲಿಯನ್ ಡಾಲರ್ ನಿವ್ವಳ ಲಾಭ ಮಾಡುತ್ತಿದೆ.

ಅಮ್ಮನ ಅಡುಗೆಮನೆಯಲ್ಲಿ ಆರಂಭವಾದ ಅದಿದಾಸ್ ಸಂಸ್ಥೆ ಇಂದು ಈ ಮಟ್ಟಿಗೆ ಬೆಳೆದು ನಿಂತಿದೆ ಎಂದರೆ ಸಾಮಾನ್ಯ ಸಂಗತಿಯಲ್ಲದಿದ್ದರೂ ಸತ್ಯವಂತೂ ಹೌದು.

**- ಕಿರಣ್ ಉಪಾಧ್ಯಾಯ,** ಬಹ್ರೈನ್

# ವಿಪತ್ತು ನಿರ್ವಹಣೆ: ಕ್ರಿಯಾ ಯೋಜನೆ ತಯಾರಿಸಲು ಸೂಚನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ವಿಪತ್ತು ನಿರ್ವಹಣೆಗಾಗಿ ಪ್ರತಿ ತಾಲ್ಲೂಕಿನಲ್ಲಿ ದುರ್ಬಲ ಸ್ಥಳಗಳನ್ನು ಗುರುತಿಸಿ ಅಗತ್ಯ ಕ್ರಿಯಾ ಯೋಜನೆ ತಯಾರಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಲತಾಕುಮಾರಿ ಅವರು ಸೂಚಿಸಿದ್ದಾರೆ.




ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಸಿ ಮಾತನಾಡಿದ ಅವರು, ಅನಿರೀಕ್ಷಿತ ಹಾಗೂ ಆಕಸ್ಮಿಕವಾಗಿ ಸಂಭವಿಸಬಹುದಾದ ಅವಘಡಗಳನ್ನು ತಡೆಯಲು ಮುನ್ನೆಚ್ಚರಿಕೆ ವಹಿಸಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಉದಾಸಿನ ಮಾಡಿ ಯಾವುದೇ ವಿಷಯವನ್ನು ಲಘುವಾಗಿ ತೆಗೆದುಕೊಳ್ಳದೆ ಗಂಭೀರವಾಗಿ ಪರಿಗಣಿಸಿ ಕ್ರಮ ವಹಿಸುವಂತೆ ಡಿ.ಸಿ. ಅಧಿಕಾರಿಗಳಿಗೆ ಸೂಚಿಸಿದರು.

ತುರ್ತು ಸಂದರ್ಭಗಳನ್ನು ಸಮರ್ಪಕವಾಗಿ ನಿರ್ವಹಿಸಲು ಕಮ್ಯೂನಿಕೇಷನ್ ಪ್ಲಾನ್ ಮಾಡಿಕೊಳ್ಳಿ ಎಂದರಲ್ಲದೆ, ಅಗತ್ಯ ಪರಿಕರಗಳನ್ನು ದಾಸ್ತಾನು ಇರುವಂತೆ ನೋಡಿಕೊಳ್ಳಿ, ಸಮನ್ವಯತೆಯಿಂದ ಕಾರ್ಯ ನಿರ್ವಹಣೆ ಮಾಡಬೇಕು. ರಾಷ್ಟ್ರೀಯ ಹೆದ್ದಾರಿ 75 ರಲ್ಲಿ ವಾಹನಗಳ ಸಂಚಾರಕ್ಕೆ ಸೂಚನಾ ಫಲಕಗಳನ್ನು ಅಳವಡಿಸಲು ಕ್ರಮ ವಹಿಸಿ. ನಿರಂತರವಾಗಿ ಮಳೆ ಬೀಳುತ್ತಿರುವುದರಿಂದ ಎಚ್ಚರ ವಹಿಸಿ 15 ದಿನಗಳು ಪ್ರತಿದಿನ ಸ್ಥಳೀಯ ತಂಡ ಗಮನಹರಿಸಬೇಕು. ಪ್ರತಿ ತಾಲ್ಲೂಕಿನಲ್ಲಿ ಕಂಟ್ರೋಲ್ ರೂಂ ತೆರೆಯಬೇಕು. ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳನ್ನು ಬಳಸಿಕೊಂಡು ಜನರಿಗೆ ಅರಿವು ಮೂಡಿಸಲು ಕ್ರಮ ವಹಿಸುವಂತೆ ತಿಳಿಸಿದರು.

ಬೀಳುವ ಹಂತದಲ್ಲಿರುವ ಮರಗಳನ್ನು ಗುರುತಿಸಿ ಅಗತ್ಯಕ್ರಮ ವಹಿಸಿ, ಹೆದ್ದಾರಿಯಲ್ಲಿ ವಾಹನ ಚಾಲನೆಗೆ ಅನುಕೂಲವಾಗುವಂತೆ ಸೂಚನಾ ಫಲಕಗಳು ಹಾಗೂ ಎಚ್ಚರಿಕೆ ಫಲಕಗಳನ್ನು ಅಳವಡಿಸಲು ಗಮನಹರಿಸಲು ನಿರ್ದೇಶನ ನೀಡಿದ ಡಿ.ಸಿ., ಯಾವುದೇ ಜೀವ ಹಾನಿಯಾಗದಂತೆ ತಡೆಯಲು ಮುನ್ನೆಚ್ಚರಿಕೆ ವಹಿಸಬೇಕು. ಅಧಿಕ ಮಳೆ ಬೀಳುತ್ತಿರುವ ಸಂದರ್ಭದಲ್ಲಿ ಬದಲಿ ಮಾರ್ಗ ಬಳಸಲು ಪ್ರಯಾಣಿಕರಿಗೆ ಉತ್ತೇಜಿಸಬೇಕು ಎಂದು ಲತಾಕುಮಾರಿ ಅವರು ಹೇಳಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಬ್ ಕುಮಾರ್, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ತಮ್ಮಯ್ಯ, ಉಪ ವಿಭಾಗಾಧಿಕಾರಿಗಳಾದ ಮಾರುತಿ, ರಾಜೇಶ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

## ಪಿಒಪಿ ಗಣೇಶ ವಿಗ್ರಹಗಳ ನಿಷೇಧ

ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಸದಸ್ಯ ಕಾರ್ಯದರ್ಶಿಗಳು ಇವರ ಸುತ್ತೋಲೆ ಪತ್ರದನ್ವಯ ಹಾಸನ ಜಿಲ್ಲೆಯಾದ್ಯಂತ ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ತಯಾರಿಸಿದ ವಿಗ್ರಹಗಳು ಹಾಗೂ ಅದೇ ಬಾರ ಲೋಹ ಮಿಶ್ರಿತ ರಾಸಾಯನಿಕಯುಕ್ತ ಬಣ್ಣದಿಂದ ಅಲಂಕೃತಗೊಂಡಂತಹ ಯಾವುದೇ ರೀತಿಯ ಗಣೇಶ ವಿಗ್ರಹಗಳ ತಯಾರಿಕೆ, ದಾಸ್ತಾನು, ಮಾರಾಟ ಮತ್ತು ವಿಸರ್ಜಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಪರಿಸರ ಸ್ನೇಹಿ ಗೌರಿ-ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಿಸಿದ ನಂತರ ಸ್ಥಳೀಯ ಸಂಸ್ಥೆಯ ವತಿಯಿಂದ ನಿಗಧಿಪಡಿಸಿರುವ ನಿಗಧಿತ ಹಾಗೂ ಗುರುತಿಸಿರುವ ಸ್ಥಳಗಳಲ್ಲಿ ಗಣೇಶ ವಿಗ್ರಹಗಳನ್ನು ವಿಸರ್ಜನೆ ಮಾಡುವುದು.

ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ವಿಸರ್ಜನೆ ಸಂದರ್ಭದಲ್ಲಿ ಮೊಬೈಲ್ ಟ್ಯಾಂಕ್‌ಗಳಲ್ಲಿ, ಕಲ್ಯಾಣಿಗಳ ಪಕ್ಕದಲ್ಲಿ ಹಸಿ ಕಸ (ಹೂವು, ಹಣ್ಣು, ಬಾಳೆಕಂಬ, ಮಾವಿನ ತೋರಣ, ಪ್ಲಾಸ್ಟಿಕ್ ಬಾಟಲ್, ಬಟ್ಟೆಗಳನ್ನು ಹಾಗೂ ಇತ್ಯಾದಿ ನಿಷೇಧಿತ ವಸ್ತುಗಳು) ಪ್ರತ್ಯೇಕಿಸಿ, ಮೂರ್ತಿಗಳೊಂದಿಗೆ ನೀರಿಗೆ ವಿಸರ್ಜಿಸದೆ ಪ್ರತ್ಯೇಕವಾಗಿ ವಿಲೇವಾರಿ ಮಾಡಲು ಕ್ರಮ ವಹಿಸುವುದು.

ಜಿಲ್ಲಾ ವ್ಯಾಪ್ತಿಯಲ್ಲಿ ವಿವಿಧ ಸ್ಥಳಗಳಲ್ಲಿ ಅನುಮತಿ ಪಡೆದು ಗಣೇಶ ವಿಗ್ರಹ ಸ್ಥಾಪನೆ ಮಾಡಿ ಪೂಜಿಸುವ ಸ್ಥಳಗಳಲ್ಲಿ ಫ್ಲಾಸ್ಟಿಕ್ಸ್, ಫ್ಲೆಕ್ಸ್ ಮತ್ತು ಇತರೆ ನಿಷೇಧಿತ ವಸ್ತುಗಳ ಬಳಕೆಯನ್ನು ನಿಷೇಧಿಸಲಾಗಿದ್ದು ಹಾಗೂ ರಾತ್ರಿ 10 ರಿಂದ ಬೆಳಿಗ್ಗೆ 6 ಗಂಟೆವರೆಗೆ ಧ್ವನಿವರ್ಧಕಗಳ ಬಳಕೆಯನ್ನು ನಿಷೇದಿಸಲಾಗಿದೆ.

ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ಪ್ಲಾಸ್ಟರ್ ಆಫ್ ಫ್ಯಾರೀಸ್ ಗಣೇಶ ಮೂರ್ತಿಗಳ ಮಾರಾಟ, ಖರೀದಿ ಕಂಡುಬಂದಲ್ಲಿ, ಅಂತಹವರುಗಳ ವಿರುದ್ಧ ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣಾ) ಕಾಯ್ದೆ-1974 ಮತ್ತು ಪರಿಸರ (ಸಂರಕ್ಷಣೆ) ಕಾಯ್ದೆ-1986 ರಡಿ ಕಾನೂನು ಕ್ರಮ ಜರುಗಿಸಲಾಗುವುದು ಎಂದಿದ್ದಾರೆ.

## ಎ.ಟಿ.ದೇವರಾಜ್ ನೂತನ ಅಧ್ಯಕ್ಷ



• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಹೋಬಳಿಯ ಪೂಮಡಿಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎ.ಟಿ.ದೇವರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷರಾಗಿದ್ದ ಪ್ರಸನ್ನ ಕುಮಾರ್ ರವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಎ.ಟಿ.ದೇವರಾಜ್ ಹೊರತುಪಡಿಸಿ ಮತ್ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವರನ್ನು ಅವಿರೋಧವಾಗಿ ಅಧ್ಯಕ್ಷರನ್ನಾಗಿ ಘೋಷಣೆ ಮಾಡಲಾಯಿತು.

ನೂತನ ಅಧ್ಯಕ್ಷ ಎ.ಟಿ.ದೇವರಾಜ್ ಮಾತನಾಡಿ, ಹಾಸನ ಜಿಲ್ಲಾ ಸಹಕಾರ ಬ್ಯಾಂಕ್‌ನ ನಿರ್ದೇಶಕರಾದ ಶಾಸಕ ಸಿ.ಎನ್.ಬಾಲಕೃಷ್ಣರವರ ಸಹಕಾರ ಮತ್ತು ಮಾರ್ಗದರ್ಶನದೊಂದಿಗೆ ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ವಿತರಣೆ, ಪಹಣಿ, ವಿತರಣೆ ಹಾಗೂ ಹೆಚ್ಚುವರಿ ಸಾಲ ಸೌಲಭ್ಯ ಸೇರಿದಂತೆ ರೈತರ ಪರವಾಗಿ ಉತ್ತಮ ಕೆಲಸ ಮಾಡಲಾಗುವುದು ಎಂದು ಹೇಳಿದರು.

ಚುನಾವಣಾಧಿಕಾರಿಯಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ ವಿಜಯೇಂದ್ರ ಹಾಗೂ ಎಚ್.ಡಿ. ಸಿ.ಸಿ. ಬ್ಯಾಂಕ್ ಮೇಲ್ವಿಚಾರಕ ಎಸ್.ಆರ್.ಮಧು ಚುನಾವಣೆ ಕರ್ತವ್ಯ ನಿರ್ವಹಿಸಿದರು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಪರಮ ದೇವರಾಜೇಗೌಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ತಾ.ಪಂ. ಮಾಜಿ ಸದಸ್ಯ ಪಿ.ಕೆ. ಮಂಜೇಗೌಡ, ಡಿ.ಎನ್.ಬಸವರಾಜ್, ಬೋರೇಗೌಡ ಇನ್ನಿತರರಿದ್ದರು.

## ಕಳ್ಳತನಕ್ಕೆ ಯತ್ನಿಸುತ್ತಿದ್ದ ಚೋರನ ಬಂಧನ

• ಪ್ರಜೋದಯ ವರದಿ

**ಸಕಲೇಶಪುರ:** ರಾತ್ರಿ ವೇಳೆ ಪಟ್ಟಣದಲ್ಲಿ ಅಂಗಡಿ ಬೀಗ ಒಡೆದು ಕಳವು ಮಾಡಲು ಮುಂದಾಗಿದ್ದ ಕಳ್ಳನನ್ನು ಪಟ್ಟಣ ಠಾಣೆ ಪೊಲೀಸರು ಬಂಧಿಸಿ ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



ಟೋಲ್ ಗೇಟ್ ನಿವಾಸಿ ಅಕ್ಷಯ್ (28) ಕಳ್ಳತನಕ್ಕೆ ಯತ್ನಿಸಿದ ಚೋರ ಎಂದು ತಿಳಿದು ಬಂದಿದ್ದು, ಭಾನುವಾರ ಮಧ್ಯರಾತ್ರಿ ಅಕ್ಷಯ್ ಕಬ್ಬಿಣದ ರಾಡ್ ಹಿಡಿದು ಪಟ್ಟಣದ ಆಜಾದ್ ರಸ್ತೆಯಲ್ಲಿ ತಿರುಗಾಡುತ್ತಿದ್ದ. ಇದನ್ನು ಹಿಂದೂ ಹಿತರಕ್ಷಣಾ ವೇದಿಕೆಯ ಗುರು ಎಂಬುವವರು ಗಮನಿಸಿ ಆತನ ಮೇಲೆ ನಿಗಾ ಇಟ್ಟಿದ್ದರು. ಕೆಲವೇ ಕ್ಷಣಗಳಲ್ಲಿ ಅಕ್ಷಯ್ ಕಾಫಿ ಪುಡಿ ಅಂಗಡಿಯೊಂದರ ಬೀಗ ಒಡೆದು ಒಳ ಪ್ರವೇಶಿಸಿ ಕಳ್ಳತನ ಮಾಡುವ ಸಂದರ್ಭದಲ್ಲಿ ಸಿಕ್ಕಿಬಿದ್ದಿದ್ದಾನೆ.

ಈತನ ಕೃತ್ಯವನ್ನು ಗಮನಿಸಿದ ಗುರು ಅವರು ಅಂಗಡಿಯ ರೋಲಿಂಗ್ ಶೆಲ್ಟರ್‌ನ ಬಾಗಿಲನ್ನು ಹೊರಗಿನಿಂದ ಎಳೆದಿಟ್ಟು ತಕ್ಷಣವೇ ನಗರ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರ ತಂಡ ಕೂಡಲೇ ದೌಡಾಯಿಸಿ ಸ್ಥಳದಲ್ಲೇ ಕಳ್ಳತನ ಕೃತ್ಯ ಎಸಗಲು ಸಜ್ಜಾಗುತ್ತಿದ್ದ ಅಕ್ಷಯ್‌ನನ್ನು ಬಂಧಿಸಿದೆ.

ಈತನ ವಿರುದ್ಧ ಕಳ್ಳತನ ಯತ್ನ ಪ್ರಕರಣ ದಾಖಲಿಸಲಾಗಿದ್ದು, ಇತ್ತೀಚೆಗೆ ಪಟ್ಟಣದಲ್ಲಿ ನಡೆದಿದ್ದ ಕೆಲವು ಸಣ್ಣಪುಟ್ಟ ಕಳ್ಳತನಗಳ ಹಿಂದೆ ಈತನದೇ ಕೈವಾಡವಿರಬಹುದೆಂಬ ಅನುಮಾನ ವ್ಯಕ್ತವಾಗಿದೆ. ಪಟ್ಟಣದಲ್ಲಿ ಕಳ್ಳತನ ಪ್ರಕರಣ ಹೆಚ್ಚಿದ್ದು ಜನರು ಭೀತಿಗೊಂಡಿದ್ದಾರೆ.

ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಕೇಂದ್ರ ಸರ್ಕಾರದ ಸಾಲ ಕಳೆದ 10 ವರ್ಷಗಳಲ್ಲಿ 130 ಲಕ್ಷ ಕೋಟಿ ಹೆಚ್ಚಳ

**ನವದೆಹಲಿ:** ಕೇಂದ್ರ ಸರ್ಕಾರದ ಸಾಲ ಕಳೆದ 10 ವರ್ಷಗಳಲ್ಲಿ 130 ಲಕ್ಷ ಕೋಟಿ ಹೆಚ್ಚಳ ಆಗಿದೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಸಂಸದ ಡಾ.ಎಂ.ಕೆ. ವಿಷ್ಣು ಪ್ರಸಾದ್ ಸೋಮವಾರ ಕೇಳಿದ ಪ್ರಶ್ನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ. 2015-16 ರಲ್ಲಿ ಕೇಂದ್ರದ ಸಾಲವು 70.98 ಲಕ್ಷ ಕೋಟಿ ಆಗಿತ್ತು. 2025-26ರಲ್ಲಿ 200.16 ಲಕ್ಷ ಕೋಟಿಗೆ ಜಿಗಿದಿದೆ. ಕೇಂದ್ರ ಈ ವರ್ಷ 4.61 ಲಕ್ಷ ಕೋಟಿ ಸಾಲ ಮರುಪಾವತಿ ಮಾಡಿದೆ. ಒಟ್ಟು ಸಾಲಕ್ಕೆ ಈ ವರ್ಷ ಪಾವತಿಸುತ್ತಿರುವ ಬಡ್ಡಿ 12.76 ಲಕ್ಷ ಕೋಟಿ ರೂ.

## ಪಾಂಚಜನ್ಯ ಗಣೇಶೋತ್ಸವಕ್ಕೆ ಧ್ವಜ ಪೂಜೆ

• ಪ್ರಜೋದಯ ವರದಿ

**ಹಾಸನ:** ಪಾಂಚಜನ್ಯ ಗಣೇಶೋತ್ಸವ ಆಚರಣೆ ಅಂಗವಾಗಿ ನಗರದ ಅರಳೆಪೇಟೆ ರಸ್ತೆಯ ಸಮೀಪ ಸೋಮವಾರ ಧ್ವಜ ಹಾಗೂ ಗೋವು ಪೂಜೆ ನೆರವೇರಿಸುವ ಮೂಲಕ ಮಾಜಿ ಶಾಸಕ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ.ಗೌಡ ಅವರು ಚಾಲನೆ ನೀಡಿದರು.



ಪಾಂಚಜನ್ಯ ಗಣಪತಿ ಸಮಿತಿ ಕಾರ್ಯದರ್ಶಿ ವೇಣುಗೋಪಾಲ್ ಅವರು ಮಾತನಾಡಿ, ಸಮಿತಿಯಿಂದ ಆ.27 ರಿಂದ ಸೆ.3 ರ ವರೆಗೂ ಗಣೇಶೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏಳು ದಿನ ವಿವಿಧ ಕಾರ್ಯಕ್ರಮ ನಡೆಯಲಿವೆ. ಅದಕ್ಕಾಗಿ ಇಂದು ಧ್ವಜ ಹಾಗೂ ಗೋವು ಪೂಜೆ ಮಾಡುವುದರ ಮೂಲಕ ಹಿರಿಯರ ಸಮ್ಮುಖದಲ್ಲಿ ಚಾಲನೆ ಕೊಡಲಾಗಿದೆ. ನಾವು ಈ ಬಾರಿಯೂ ಮಣ್ಣಿನ ಗಣಪತಿ ಪ್ರತಿಷ್ಠಾಪನೆ ಮಾಡುತ್ತಿದ್ದೇವೆ. ಸಾಧ್ಯವಾದಷ್ಟು ಫ್ಲೆಕ್ಸ್‌ಗಳನ್ನು ಕಡಿಮೆ ಮಾಡಲಾಗುವುದು. ಬಟ್ಟೆ ಬಾವುಟ, ಬ್ಯಾನರ್ ಉಪಯೋಗಿಸುತ್ತೇವೆ. ಸಾಧ್ಯವಾದಷ್ಟು ಕಡಿಮೆ ಮಾಡಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರ ಗಣೇಶೋತ್ಸವ ಹುಮ್ಮಸ್ಸನ್ನು ಕಡಿಮೆ ಮಾಡಲು ಸರ್ವ ಪ್ರಯತ್ನ ಮಾಡುತ್ತಿದೆ. ಗಣೇಶ ಉತ್ಸವದಲ್ಲಿ ಡಿ.ಜೆ. ಬ್ಯಾನ್ ಮಾಡಬೇಕು ಎನ್ನುವ ಹುನ್ನಾರ, ಫ್ಲೆಕ್ಸ್ ಪ್ರಕಟಕ್ಕೂ ಮುನ್ನವೇ ಪೊಲೀಸ್ ಅನುಮತಿ ಪಡೆಯಬೇಕು ಎಂದು ಷರತ್ತು ವಿಧಿಸಲಾಗಿದೆ. ಹಿಂದೂ ಕಾರ್ಯಕರ್ತರ ಸ್ವಾತಂತ್ರ್ಯ ಕಸಿಯಲಾಗಿದೆ ಎಂಬ ಆರೋಪ ಇದೆ. ಕಾಂಗ್ರೆಸ್ ಸರ್ಕಾರ ಹಿಂದೂಗಳು ಶಾಂತಿಯಿಂದ, ನೆಮ್ಮದಿಯಿಂದ ಗಣೇಶೋತ್ಸವ ಮಾಡಲು ಸರ್ಕಾರ ಅನೇಕ ತಡೆ ಮಾಡುತ್ತಿದೆ ಎಂದು ದೂರಿದ ಅವರು, ಮುಖ್ಯಮಂತ್ರಿ ಈ ಬಗ್ಗೆ ಗಮನಹರಿಸಿ ನಿಬಂಧನೆ ಸಡಿಲ ಮಾಡಿ, ಅದ್ದೂರಿಯಾಗಿ ಗಣೇಶ ಉತ್ಸವ ಆಚರಿಸಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು.

ಪಾಂಚಜನ್ಯ ಗಣಪತಿ ಸಮಿತಿ ಅಧ್ಯಕ್ಷ ವಾಸು, ಗೌರವಾಧ್ಯಕ್ಷ ದಯಾನಂದ್, ಹಿಂದೂ ಜಾಗರಣ ವೇದಿಕೆಯ ಲೋಕೇಶ್, ವಿಹೆಚ್‌ಪಿ ವಿಭಾಗೀಯ ಕಾರ್ಯದರ್ಶಿ ಮಹಿಪಾಲ್, ಕಂಚಮಾರನಹಳ್ಳಿ ಕಾಂತಣ್ಣ, ವಿಜಿಕುಮಾರ್, ಮಹೇಶ್, ಲಾವಣ್ಯ, ಶ್ವೇತಾ, ಅನಿತಾ ಇತರರಿದ್ದರು.

## ಹಲವೆಡೆ ಇಂದು ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಆ.19 ರಂದು 66/11 ಕೆ.ವಿ ಬೇಲೂರು, ಗೆಂಡೇಹಳ್ಳಿ ಮತ್ತು ಉಗನೆ ವಿ.ವಿ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ, ಬೆಳಿಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



66/11ಕೆ.ವಿ ಬೇಲೂರು, ಗೆಂಡೇಹಳ್ಳಿ ಮತ್ತು ಉಗನೆ ವಿ.ವಿ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ ಹಾಗೂ ಆ.20 ರಂದು ರಾಮೇಶ್ವರನಗರ ವಿ.ವಿ ಕೇಂದ್ರದಿಂದ ಕೆ.ಆರ್ ಪುರಂ, ಉದಯಗಿರಿ, ರಿಂಗ್‌ರೋಡ್, ಬೂವನಹಳ್ಳಿ, ಸತ್ಯಮಂಗಲ, ಶಂಕರಿಪುರಂ, ದೊಡ್ಡಪುರ, ಸಿರಿಕಲ್ಚರ್, ಕಾಟಿಹಳ್ಳಿ, ಎಸ್.ಎಂ. ಕೃಷ್ಣ ನಗರ ಹಾಗೂ ಆ.20 ರಂದು ಮೊಸಳೆಹೊಸಹಳ್ಳಿ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಮಾದಾಪುರ, ಮೊಸಳೆಹೊಸಹಳ್ಳಿ, ಬನವಾಸೆ, ಎಂ.ಹಿರೇಹಳ್ಳಿ, ಕಿತ್ತಾನೆ, ಮಾರೇನಹಳ್ಳಿ, ಬಸ್ತಿಹಳ್ಳಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕವಿಪ್ರನಿನಿ, ಹಾಸನ ಕಾರ್ಯಾಚರಣೆಗಳ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ತಿಳಿಸಿದ್ದಾರೆ.

## ಶ್ರವಣಬೆಳಗೊಳದಲ್ಲಿ ಇಂದ್ರಪ್ರತಿಷ್ಠೆ ಧಾರ್ಮಿಕ ಪೂಜೆ ಸಂಪನ್ನ

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಇಲ್ಲಿಯ ಭಂಡಾರ ಬಸದಿಯ ಚವ್ವಿಸ ತೀರ್ಥಂಕರರಿಗೆ ಸಂಪೂರ್ಣ ಧಾಮ ಸಂಪ್ರೋಕ್ಷಣೆಯ ಪ್ರಯುಕ್ತ ಇಂದ್ರಪ್ರತಿಷ್ಠೆ, ಸರ್ವ ದೋಷ ಪ್ರಾಯಶ್ಚಿತ್ತದ ಸಕಲ ಧಾರ್ಮಿಕ ವಿಧಿ ವಿಧಾನಗಳನ್ನು ಆಚಾರ್ಯರ ಮುನಿಗಳ ಸಾನಿಧ್ಯ ಮತ್ತು ಕ್ಷೇತ್ರದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕರ ಸ್ವಾಮೀಜಿ ಮಾರ್ಗದರ್ಶನದಲ್ಲಿ ಸೋಮವಾರ ಸಂಪನ್ನಗೊಂಡಿತು.



ವಜ್ರಲೇಪನಗೊಂಡ ಖಡ್ಗಾಸನದ 24 ತೀರ್ಥಂಕರರ ಸನ್ನಿಧಿಯಲ್ಲಿ ಮಂಗಲ ಕಲಶಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಲಘು ಪಂಚಕಲ್ಯಾಣದ ಪ್ರಯುಕ್ತ ತೀರ್ಥಂಕರರಿಗೆ ಕೇವಲ ಜ್ಞಾನ ಕಲ್ಯಾಣ, ಮೋಕ್ಷ ಕಲ್ಯಾಣದ ಧಾರ್ಮಿಕ ವಿಧಿಗಳನ್ನು ಆಚಾರ್ಯರ ಮಾರ್ಗದರ್ಶನದಲ್ಲಿ ತ್ಯಾಗಿಗಳು ಪ್ರತಿಷ್ಠಾಚಾರ್ಯರು ನೆರವೇರಿಸಿದರು. ಣಮೋಕಾರ ಮಹಾಮಂತ್ರ ಮತ್ತು ವಿವಿಧ ಮಂಗಲ ವಾದ್ಯಗಳು ನುಡಿಸುತ್ತಿದ್ದಂತೆ ಕೇಸರಿ ವಸ್ತ್ರಧಾರಿಗಳು ಕಿರೀಟ ಧರಿಸಿದ 24 ಜನ ಶ್ರಾವಕರು ಏಕ ಕಾಲದಲ್ಲಿ ತೀರ್ಥಂಕರರಿಗೆ ಜಲಾಭಿಷೇಕ ನೆರವೇರಿಸಿದರು. ನಂತರ ಕ್ಷೀರಾಭಿಷೇಕ ಅಷ್ಟಗಂಧಗಳಿಂದ ಅಭಿಷೇಕ ನಡೆದು ಪುಷ್ಪವೃಷ್ಟಿ ಮಾಡಲಾಯಿತು. ಮಹಾಶಾಂತಿ ಧಾರಾ ಕಲಶದೊಂದಿಗೆ ಮಹಾ ಮಂಗಳಾರತಿ ಮಾಡಲಾಯಿತು. 2 ದಿನಗಳಿಂದ ಭಾಗವಹಿಸಿದ್ದ ಆಚಾರ್ಯರಿಗೆ ಮತ್ತು ಎಲ್ಲಾ ತ್ಯಾಗಿಗಳಿಗೆ ಅರ್ಘ್ಯಗಳನ್ನು ಸಮರ್ಪಿಸಿ ಗಂಧೋದಕ ವಿತರಿಸಲಾಯಿತು.

ಭಟ್ಟಾರಕ ಸ್ವಾಮೀಜಿ ಮಾತನಾಡಿ, ಕ್ಷೇತ್ರದಲ್ಲಿ ನಡೆದು ಬಂದಿರುವ ಪ್ರಾಚೀನ ಪರಂಪರೆ ಉಳಿಸಬೇಕಾಗಿರುವುದರಿಂದ ಜಿನ ಮೂರ್ತಿಗಳಿಗೆ ಆಗಿದ್ದ ಭಿನ್ನವನ್ನು ವಜ್ರಲೇಪನ ಮಾಡಿಸಲಾಯಿತು. ಹಾಗಾಗಿ ಧಾಮ ಸಂಪ್ರೋಕ್ಷಣೆಯ ಲಘು ಪಂಚಕಲ್ಯಾಣದ ಧಾರ್ಮಿಕ ವಿಧಿ ಮತ್ತು ಅಭಿಷೇಕಗಳನ್ನು ನಡೆಸಲಾಯಿತು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕ್ಷೇತ್ರದ ದಾನಿಗಳಿಗೆ ಮತ್ತು ಒರಿಸ್ಸಾ ರಾಜ್ಯದಿಂದ ಆಗಮಿಸಿದ್ದ ಶಿಲ್ಪಿಗಳಿಗೆ ಕ್ಷೇತ್ರದ ವತಿಯಿಂದ ಗೌರವಿಸಲಾಯಿತು. ಪೂಜೆಯ ನೇತೃತ್ವವನ್ನು ಪ್ರತಿಷ್ಠಾಚಾರ್ಯರುಗಳಾದ ಎಸ್.ಪಿ.ಜಿನೇಶ್, ಎಸ್.ಡಿ.ನಂದಕುಮಾರ್ ಶಾಸ್ತ್ರಿ, ಪ್ರೇಂಕುಮಾರ್, ಎಸ್.ಎಸ್.ವಿಮಲ್ ಕುಮಾರ್ ವಹಿಸಿದ್ದರು.

ಆಚಾರ್ಯ ಸುವಿಧಿ ಸಾಗರ ಮಹಾರಾಜರು, ಆಚಾರ್ಯ ವರ್ಧಮಾನ ಸಾಗರ ಮಹಾರಾಜರು, ಮತ್ತು ವಿದ್ಯಾಸಾಗರ ಮಹಾರಾಜರ ಸಂಘಸ್ಥ ತ್ಯಾಗಿಗಳು ಹಾಗು ಅರಹಂತಗಿರಿಯ ಧವಲಕೀರ್ತಿ ಸ್ವಾಮೀಜಿ, ಕನಕಗಿರಿ ಜೈನಮಠದ ಭುವನಕೀರ್ತಿ ಸ್ವಾಮೀಜಿ, ಇತರರು ಸಾನಿಧ್ಯ ವಹಿಸಿದ್ದರು.

## ಆ.22 ರಂದು ನೇರ ಸಂದರ್ಶನ




• ಪ್ರಜೋದಯ ವರದಿ

ಹಾಸನ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಹಾಸನ ಮತ್ತು ಮೆಡಿ ಸೇವ್ ಹೆಲ್ತ್ ಎಂಡ್ ಲೈಫಸ್ಟೈಲ್ ಪ್ರೈವೆಟ್ ಲಿಮಿಟೆಡ್ ಹಾಗೂ ಬೆಲ್ ಸ್ಟಾರ್ ಮೈಕ್ರೋಫೈನಾನ್ಸ್ ಲಿಮಿಟೆಡ್ ಸಂಸ್ಥೆಯ ಸಹಭಾಗಿತ್ವದಲ್ಲಿ ಉದ್ಯೋಗ ನೀಡುವ ಸಂಬಂಧ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ರೈಲ್ವೇ ಸ್ಟೇಷನ್ ಹತ್ತಿರ, ಸರ್ಕಾರಿ ಐ.ಟಿ.ಐ. ಕಾಲೇಜು ಆವರಣದಲ್ಲಿ ಆ.22 ರಂದು ಬೆಳಿಗ್ಗೆ 10.30 ಗಂಟೆಗೆ ನೇರ ಸಂದರ್ಶನ ನಡೆಯಲಿದ್ದು, ಎಸ್‌ಎಸ್‌ಎಲ್‌ಸಿ, ಐಟಿಐ, ಡಿಪ್ಲೊಮಾ, ಪಿಯುಸಿ, ಯಾವುದೇ ಪದವಿ ಪಾಸಾದ ಪುರುಷ/ಮಹಿಳಾ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

ದೂರವಾಣಿ ಸಂಖ್ಯೆ: 08172-296374, 9743144950 ಹಾಗೂ 8722606874 ಅವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

## ಧರ್ಮಸ್ಥಳ ವಿರುದ್ಧ ಅಪಪ್ರಚಾರ: ಜಾಗೃತ ಪರಿಶೀಲನೆ ಅಗತ್ಯ

• ಪ್ರಜೋದಯ ವರದಿ

**ಬೇಲೂರು:** ಕೋಟ್ಯಾಂತರ ಭಕ್ತರ ಭಾವನೆಗಳ ಆರಾಧ್ಯದೈವ ಎಂದೇ ಖ್ಯಾತಿಯಾಗಿರುವ ಧರ್ಮಸ್ಥಳದ ಬಗ್ಗೆ ಇತ್ತೀಚಿನ ದಿನಗಳಲ್ಲಿ ಕೆಲವರು ವಿನಾಃ ಕಾರಣ ಇಲ್ಲ ಸಲ್ಲದ ಅಪಪ್ರಚಾರ ಮತ್ತು ಆರೋಪಗಳನ್ನು ಮಾಡುತ್ತಾ ಭಕ್ತರ ಭಾವನೆಗಳಿಗೆ ಧಕ್ಕೆ ಉಂಟು ಮಾಡುತ್ತಿರುವ ಹಿನ್ನೆಲೆಯಲ್ಲಿ ಪತ್ರಿಕಾ ಮಿತ್ರರು ವಾಸ್ತವಾಂಶಕ್ಕೆ ಗಮನ ನೀಡಬೇಕಿದೆ ಎಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯ ಗೌರವ ಕಾರ್ಯದರ್ಶಿ ಹೆಚ್.ಬಿ. ಮದನಗೌಡ ಕಿವಿಮಾತು ಹೇಳಿದರು.



ಪಟ್ಟಣದ ಜೂನಿಯರ್ ಕಾಲೇಜ ಮೈದಾನದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಪ್ರತಿ ವರ್ಷ ನಡೆಸುವ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಹಿನ್ನೆಲೆಯಲ್ಲಿ ವಿವಿಧ ಇಲಾಖೆಯೊಂದಿಗೆ ಸ್ನೇಹಪರ ಕ್ರಿಕೆಟ್ ಕ್ರೀಡಾಕೂಟ ಸಮಾರಂಭಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಕಳೆದ ಆರು ತಿಂಗಳ ಹಿಂದೆ ನಾನು ಬೇಲೂರು ಪತ್ರಕರ್ತರ ಸಂಘದ ಸಮಾರಂಭದಲ್ಲಿ ಧರ್ಮಸ್ಥಳದ ಬಗ್ಗೆ ಮಾತನಾಡಿದ್ದೆ. ಅಲ್ಲಿ ಅಂತಹ ಗುರುತರವಾದ ಪ್ರಕರಣ ನಡೆದಿದ್ದರೆ ಸತ್ಯಾಂಶವನ್ನು ನಾಡಿಗೆ ತಿಳಿಸಲಿ, ಇದನ್ನು ಕೆಲವರು ಬಂಡವಾಳ ಮಾಡಿಕೊಂಡು ಶ್ರೀಕ್ಷೇತ್ರದ ಮೇಲೆ ಅಪಪ್ರಚಾರಕ್ಕೆ ಮುಂದಾಗಿರುವುದು ಎಷ್ಟರ ಮಟ್ಟಿಗೆ ಸರಿ, ಸರ್ಕಾರ ಈ ಬಗ್ಗೆ ಜಾಗೃತ ಮನಸ್ಸಿನಿಂದ ಪರಿಶೀಲನೆ ನಡೆಸಬೇಕು ಎಂದರು.

ಕ್ರೀಡೆ ಮನುಷ್ಯನಿಗೆ ಅತ್ಯಮೂಲ್ಯ, ಕಾರಣ ಸದೃಡ ಆರೋಗ್ಯಕ್ಕೆ ದೈಹಿಕ ಕಸರತ್ತು ಮುಖ್ಯವಾಗಿದೆ. ವಿಶೇಷವಾಗಿ ಪತ್ರಕರ್ತರು ದಿನನಿತ್ಯ ಒಂದಲ್ಲ ಒಂದು ಸುದ್ದಿಯಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂಬ ಹಿನ್ನೆಲೆಯಲ್ಲಿ ವಿವಿಧ ಇಲಾಖೆಗಳೊಂದಿಗೆ ಸ್ನೇಹಪರವಾದ ಕ್ರಿಕೆಟ್ ಪಂದ್ಯಾವಳಿಗೆ ಮುಂದಾಗಿರುವುದು ಅರ್ಥಪೂರ್ಣವಾಗಿದೆ. ಬೇಲೂರು ತಾಲ್ಲೂಕು ಕಾರ್ಯನಿರತ ಪತ್ರಕರ್ತರು ಜಿಲ್ಲೆಯಲ್ಲಿ ಕ್ರಿಯಾಶೀಲತೆ ಕೆಲಸ ಮಾಡುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಆರಕ್ಷಕ ನಿರೀಕ್ಷಕ ರೇವಣ್ಣ ಮಾತನಾಡಿ, ಪತ್ರಕರ್ತರಿಗೆ ಕ್ರೀಡೆಯು ಬಹಳ ಮುಖ್ಯವಾಗಿದೆ. ಏಕೆಂದರೆ ಕ್ರೀಡೆಯು ಅವರ ವೃತ್ತಿಜೀವನ ಮತ್ತು ಸಮಾಜದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕ್ರೀಡಾ ಪತ್ರಕರ್ತರು ಕಾರ್ಯಕ್ರಮಗಳನ್ನು ವರದಿ ಮಾಡುತ್ತಾರೆ, ವಿಶ್ಲೇಷಿಸುತ್ತಾರೆ ಮತ್ತು ಜಗತ್ತಿನಲ್ಲಿ ನಡೆಯುವ ಘಟನೆಗಳ ಬಗ್ಗೆ ಜನರಿಗೆ ತಿಳಿಸುತ್ತಾರೆ. ಪತ್ರಕರ್ತರು ಕ್ರೀಡೆ ಮತ್ತು ಸಮಾಜದ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಮತ್ತು ವಿವರಿಸಲು ಸಹಾಯ ಮಾಡುತ್ತಾರೆ. ಬೇಲೂರು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ ಈ ಹಿಂದಿನಿಂದಲೂ ಕೂಡ ಸೌಹಾರ್ದತೆಯ ಕ್ರೀಡಾಕೂಟವನ್ನು ನಡೆಸುತ್ತಾ ಬಂದಿದ್ದು ನಿಜಕ್ಕೂ ಅಗಮ್ಯವಾಗಿದೆ ಎಂದರು.

ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ, ಜಿಲ್ಲಾ ಉಪಾಧ್ಯಕ್ಷ ಡಿ.ಬಿ. ಮೋಹನಕುಮಾರ್, ತಾಲ್ಲೂಕು ಅಧ್ಯಕ್ಷ ರಘುನಾಥ್, ಪ್ರಧಾನ ಕಾರ್ಯದರ್ಶಿ ಬಿ.ಬಿ.ಶಿವರಾಜ್, ಉಪಾಧ್ಯಕ್ಷ ಜಗದೀಶ್, ಸಂಘದ ಮಾಜಿ ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಮಾಜಿ ಅಧ್ಯಕ್ಷರಾದ ಭಾರತಿ ಗೌಡ, ಎಂ.ದಯಾನಂದ, ಲೋಹಿತ್, ತೀರ್ಥಂಕರ ಇತರರು ಹಾಜರಿದ್ದರು.

## ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕು ಮಟ್ಟದ ದಸರಾ ಕ್ರೀಡಾ ಕೂಟದ ಆಯ್ಕೆ ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಕೆಳಕಂಡ ದಿನಾಂಕ ಮತ್ತು ಸ್ಥಳಗಳಲ್ಲಿ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದ ಆಯ್ಕೆ ಸ್ಪರ್ಧೆಯನ್ನು ನಡೆಸಲಾಗುವುದು. ಕ್ರೀಡಾಪಟುಗಳು ಕ್ರೀಡಾಕೂಟ ಜರುಗುವ 2 ದಿನ ಮುಂಚೆ ಆ.22 ರೊಳಗೆ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳ ಬಳಿ ನೊಂದಣಿ ಮಾಡಿಕೊಂಡು ಕ್ರೀಡಾಕೂಟದಲ್ಲಿ ಭಾಗವಹಿಸಲು ಕೋರಿದೆ.

ಆಲೂರು ತಾಲ್ಲೂಕು ಕ್ರೀಡಾಂಗಣ (9448870427), ಅರಸೀಕೆರೆ ತಾಲ್ಲೂಕು ಕ್ರೀಡಾಂಗಣ (8971968408), ಅರಕಲಗೂಡು (9900770571), ಬೇಲೂರು ತಾಲ್ಲೂಕು ಶಿವನಂಜುಂಡೇಶ್ವರ ಪ್ರೌಢಶಾಲೆ ಮೈದಾನ, ಇಬ್ಬಿಡು (9980119510), ಚನ್ನರಾಯ ಪಟ್ಟಣ ತಾಲ್ಲೂಕು ಕ್ರೀಡಾಂಗಣ (98445 51946), ಹೊಳೆನರಸೀಪುರ ತಾಲ್ಲೂಕು ಕ್ರೀಡಾಂಗಣ (988036 2949), ಸಕಲೇಶಪುರ ತಾಲ್ಲೂಕು ಕ್ರೀಡಾಂಗಣ (9449226045), ಹಾಸನ ಜಿಲ್ಲಾ ಕ್ರೀಡಾಂಗಣ (9448427383) ಹಾಸನದಲ್ಲಿ ಆ.24 ಮತ್ತು ಆ.25 ರಂದು ನಡೆಯಲಿದೆ.

**ತಾಲ್ಲೂಕು ಮಟ್ಟದ ದಸರಾ ಕ್ರೀಡಾ ಕೂಟದ ನಿಯಮಗಳು:** ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಅಥ್ಲೆಟಿಕ್ಸ್, ವಾಲಿಬಾಲ್, ಖೋ-ಖೋ, ಕಬ್ಬಡಿ, ಪುಟ್ಬಾಲ್, ಥ್ರೋಬಾಲ್, ಯೋಗ ಸ್ಪರ್ಧೆಗಳನ್ನು ಮಾತ್ರ ಏರ್ಪಡಿಸಲಾಗುವುದು. ವೈಯಕ್ತಿಕ ಕ್ರೀಡೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದವರು ಹಾಗೂ ಗುಂಪು ಕ್ರೀಡೆಯಲ್ಲಿ ಪ್ರಥಮ/ಆಯ್ಕೆ ತಂಡ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹತೆ ಪಡೆದಿರುತ್ತಾರೆ.

ಆಯಾ ತಾಲ್ಲೂಕಿನ ಕ್ರೀಡಾಪಟುಗಳು ಆಯಾ ತಾಲ್ಲೂಕಿನಲ್ಲಿ ಮಾತ್ರ ಭಾಗವಹಿಸಲು ಅರ್ಹತೆ ಹೊಂದಿರುತ್ತಾರೆ. ಭಾಗವಹಿಸುವ ಸಮಯದಲ್ಲಿ ಆಧಾರ್ ಕಾರ್ಡ್ ತರುವುದು ಕಡ್ಡಾಯವಾಗಿರುತ್ತದೆ. ಸ್ಪರ್ಧೆಯನ್ನು ಏರ್ಪಡಿಸಲು ಕನಿಷ್ಠ 4 ತಂಡಗಳು ಇರಬೇಕು. ಇಲ್ಲದಿದ್ದಲ್ಲಿ ಆಯ್ಕೆ ನಡೆಸಿ ಮುಂದಿನ ಹಂತಕ್ಕೆ ಕಳುಹಿಸಲಾಗುವುದು. ಒಬ್ಬರಿಗೆ ಎರಡು ವೈಯಕ್ತಿಕ ಹಾಗೂ ಒಂದು ಗುಂಪು ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.

ಕ್ರೀಡಾಪಟುಗಳು ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು ವಿಧಿಸುವ ನಿಯಮಾನುಸಾರ ಷರತ್ತಿಗೊಳಪಟ್ಟು ಕ್ರಿಡಾಕೂಟದಲ್ಲಿ ಭಾಗವಹಿಸಬಹುದು.

## ವಿದ್ಯಾರ್ಥಿ ನಿಲಯಗಳ ಪ್ರವೇಶಾತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪ.ಜಾ/ಪ.ವರ್ಗದ ಸಾಮಾನ್ಯ ಪದವಿ ಕೋರ್ಸಿನ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ 2025-26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ದಿನಾಂಕವನ್ನು ವಿಸ್ತರಿಸಲಾಗಿರುತ್ತದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ: ಪ್ರವರ್ಗ-1, ಎಸ್.ಸಿ ಎಸ್.ಟಿ ಗಳಿಗೆ ರೂ.2.50 ಲಕ್ಷ, ಪ್ರವರ್ಗ-2ಎ 2ಬಿ,3ಎ, 3ಬಿ ಇತರೆ ಹಿಂದುಳಿದ ವರ್ಗ ಹಾಗೂ ಇತರೆ ರೂ.1 ಲಕ್ಷ. ವಿದ್ಯಾರ್ಥಿಗಳು https://shp.karnataka.gov.in/bcwd ಅನ್ನು ಸಂಪರ್ಕಿಸಿ ಆನ್‌ಲೈನ್ ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಆ.25 ಕೊನೆಯ ದಿನಾಂಕವಾಗಿದೆ.

ತಾಲ್ಲೂಕುವಾರು ವಿದ್ಯಾರ್ಥಿ ನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ www.bcwd.karnataka.gov.in ನ್ನು ನೋಡಬಹುದು.

ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd-helpline@gmail.com ಗೆ ಇ-ಮೇಲ್ ಮುಖಾಂತರ ಅಥವಾ ಜಿಲ್ಲಾ /ತಾಲ್ಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು.

ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆ: 8050770004 ಮತ್ತು 8050770005 ಆಗಿದ್ದು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯುವಕರ ಭವಿಷ್ಯ ಉಳಿಸಬೇಕಾದರೆ ಎಲ್ಲರೂ ಕೈಜೋಡಿಸಬೇಕು: ಹೆಚ್.ಎಂ.ವಿಶ್ವನಾಥ್

# ಆ.21 ರಂದು ಡ್ರಗ್ಸ್ ಮುಕ್ತ ಸಕಲೇಶಪುರ ಸಮಾವೇಶ

• ಪ್ರಜೋದಯ ವರದಿ

**ಸಕಲೇಶಪುರ:** ಡ್ರಗ್ಸ್ ಬಳಕೆಯನ್ನು ತಡೆಗಟ್ಟುವುದು ಪ್ರತಿಯೊಬ್ಬರ ಕರ್ತವ್ಯ. ನಮ್ಮ ಮಕ್ಕಳು, ವಿದ್ಯಾರ್ಥಿಗಳು ಮತ್ತು ಯುವಕರ ಭವಿಷ್ಯವನ್ನು ಉಳಿಸಬೇಕಾದರೆ ಎಲ್ಲರೂ ಕೈಜೋಡಿಸಬೇಕು ಎಂದು ಮಾಜಿ ಶಾಸಕ ಹಾಗೂ ಡ್ರಗ್ಸ್ ಮುಕ್ತ ಭಾರತ ಆಂದೋಲನದ ಪ್ರಮುಖ ಹೆಚ್.ಎಂ.ವಿಶ್ವನಾಥ್ ಹೇಳಿದರು.




ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ಆ.21 ರಂದು ನಡೆಯಲಿರುವ ಡ್ರಗ್ಸ್ ಮುಕ್ತ ಸಕಲೇಶಪುರ ಎರಡನೇ ವರ್ಷದ ಸಮಾವೇಶ ಕುರಿತು ಮಾಹಿತಿ ನೀಡಿದ ಅವರು, ಸಮಾಜದ ಜವಾಬ್ದಾರಿ ಸುರಕ್ಷಿತ ಭವಿಷ್ಯ ಎಂಬ ಘೋಷವಾಕ್ಯದೊಂದಿಗೆ ನಡೆಯುವ ಈ ಸಮಾವೇಶದಲ್ಲಿ ಡ್ರಗ್ಸ್ ಬಳಕೆಯಿಂದ ಉಂಟಾಗುವ ದೈಹಿಕ ಮಾನಸಿಕ ಹಾನಿ ಕುಟುಂಬ ಮತ್ತು ಸಮಾಜದ ಮೇಲೆ ಬೀರುವ ದುಷ್ಪರಿಣಾಮಗಳ ಕುರಿತು ಚರ್ಚೆ ನಡೆಯಲಿದೆ ಎಂದರು.

ಕಾರ್ಯಕ್ರಮಕ್ಕೆ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ ಆರ್ ಪಾಟೀಲ್ ಪಂಜಾಬ್ ರಾಜ್ಯದ ಡ್ರಗ್ಸ್ ಮುಕ್ತ ಭಾರತ ಆಂದೋಲನದ ಪ್ರಮುಖ ಡಾ ಸುಖ್ಜೋತ್ ಸಿಂಗ್ ಮಹಾರಾಷ್ಟ್ರದ ಆಂದೋಲನದ ಪ್ರಮುಖ ಅವಿನಾಶ್ ಕಾಕಡೆ ನಾಟಕ ನಿರ್ದೇಶಕ ಪ್ರಸನ್ನ ಗಾಂದಿವಾದಿ ಸೇರಿದಂತೆ ಅನೇಕ ಗಣ್ಯರು ಹಾಗೂ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಡ್ರಗ್ಸ್ ವಿರುದ್ಧ ಹೋರಾಡಲು ಸಮಾಜದ ಪ್ರತಿಯೊಬ್ಬರೂ ಹೊಣೆಗಾರಿಕೆಯಿಂದ ವರ್ತಿಸಿದರೆ ಸಕಲೇಶಪುರವನ್ನು ಡ್ರಗ್ಸ್ ಮುಕ್ತಗೊಳಿಸುವುದು ಖಚಿತ ಎಂದು ವಿಶ್ವನಾಥ್ ವಿಶ್ವಾಸ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದ ಸಂಚಾಲಕ ಮಲ್ನಾಡ್ ಮೆಹಬೂಬ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೈಭೀಮ್ ಮಂಜು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಶಾರದಾ ಗುರುಮೂರ್ತಿ, ಅರ್ಚನ ಜಯಂತ್, ಜಾಮಿಯಾ ಮಸೀದಿ ಅಧ್ಯಕ್ಷ ಅಮ್ಜದ್ ಸಾಬ್, ಉಪಾಧ್ಯಕ್ಷ ಎಸ್. ಎಸ್. ಅಸ್ಲಂ, ಮಲ್ನಾಡ್ ಜಾಕೀರ್ ಜನಪರ ಹೋರಾಟ ಸಂಘಟನೆಯ ರವಿಕುಮಾರ್, ಗಣಪತಿ ಸೇವಾ ಸಮಿತಿಯ ನಂದಿ ಕೃಪರಾಜು, ಸನಾತನ ಟ್ರಸ್ಟ್ ಲೋಹಿತ್, ಮಲೆನಾಡು ರಕ್ಷಣಾ ವೇದಿಕೆಯ ಸಾಗರ್ ಜಾನೆಕೆರೆ, ಕರ್ನಾಟಕ ರಕ್ಷಣಾ ವೇದಿಕೆಯ ರಮೇಶ್ ಪೂಜಾರಿ, ತಿಮ್ಮಯ್ಯ, ಹರೀಶ್, ಸಿಐಟಿಯು ಮುಖಂಡ ವಿರೇಶ್ ಕಾಡಪ್ಪ, ಮೂಲ ನಿವಾಸಿ ಹೋರಾಟ ಸಂಘಟನೆಯ ಚಂದ್ರು, ವೀರಶೈವ ಸಮಾಜದ ಶ್ವೇತ ರವಿಕುಮಾರ್, ಸಾಯಿರಾ ಭಾನು ಸೇರಿದಂತೆ ಹಲವರು ಹಾಜರಿದ್ದರು.

## ವಿಶೇಷ ಪೂಜೆ



• ಪ್ರಜೋದಯ ವರದಿ

**ಹಾರನಹಳ್ಳಿ:** ಇಲ್ಲಿನ ಶ್ರೀ ಗುರು ಪರಮಾನಂದಸ್ವಾಮಿ ವೇದಿಕೆಯಲ್ಲಿ ಹಾರನಹಳ್ಳಿ, ಯರೇಹಳ್ಳಿ ವೇದಿಕೆಯ ಆಜುಬಾಜು ತೋಟದ ಭಕ್ತರುಗಳಿಂದ ಶ್ರಾವಣ ಸೋಮವಾರ ಪ್ರಯುಕ್ತ ಶ್ರೀ ಗುರುಗಳ ಸನ್ನಿಧಿಯಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ವೈಭವದಿಂದ ನಡೆಯಿತು.

ಶ್ರೀ ಗುರು ಪರಮಾನಂದ ಮಹಾಸ್ವಾಮಿ ಶಿಲಾ ಪಾದುಕೆಗೆ ಶ್ರೀ ಪರಮೇಶ್ವರ ಶಿವಲಿಂಗಕ್ಕೆ ಪಂಚಾಮೃತ ಅಭಿಷೇಕ ರುದ್ರಾಭಿಷೇಕ ಅರ್ಚನೆ ವಿಶೇಷ ಪೂಜೆ ಅಲಂಕಾರ ನಡೆಯಿತು. ಭಕ್ತರು ವೇದಿಕೆಯ ಅರಳಿಮರ ಸ್ತೋತ್ರ ಭಕ್ತಿ ಭಾವದಿಂದ ಪ್ರಕಾರ ಪ್ರದಕ್ಷಿಣೆ ಮಾಡಿ ಗುರುಪಾದಕ ದರ್ಶನ ಪಡೆದರು.

